NON-OFFICIAL RESOLUTION

Re: APPOINTMENT OF A COMMISSION TO ASSESS PROPERTIES OWNED AFTER 1947 BY MINISTERS, ETC.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ನನ್ನ ಸ್ನೇಹಿತರಾದ ಶ್ರೀಮಾನ್ ಕೇಶವಮೂರ್ತಿಗಳು ಈ ಸಭೆಯ ಮುಂದೆ ಮಂಡಿಸಿದ್ದಂಥ ನಿರ್ಣಯದ ವಿಷಯದಲ್ಲಿ ಶ್ರೀಮಾನ್ ಕೇಶವಮೂರ್ತಿಗಳೇ ಅಲ್ಲ, ಈ ಪಕ್ಷದ ಸದಸ್ಯರುಗಳೇ ಅಲ್ಲ, ಇವತ್ತು ಅಧಿಕಾರದಲ್ಲಿರತಕ್ಕ ಪಕ್ಷವೂ ಕೂಡ ಬಹಳ ಸುದೀರ್ಘವಾಗಿ ಯೋಚನೆ ಮಾಡುತ್ತಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಈ ರಾಷ್ಟ್ರದಲ್ಲಿರತಕ್ಕ ಅನೇಕ ಜನ ಇದನ್ನು ಯಾವ ರೀತಿ ಮಾಡಿದರೆ ಇವೆಲ್ಲವನ್ನೂ ತಪ್ಪಿಸುವುದಕ್ಕೆ ಸಾಧ್ಯ, ಇವೆಲ್ಲಾ ತಪ್ಪಿದರೆ ಸಮಾಜ ಬೆಳೆಯುವುದಕ್ಕೆ ಸಹಾಯವಾಗುತ್ತದೆಂದು ಯೋಚನೆ ಮಾಡುತ್ತಿದ್ದಾರೆ, ಸಮಾಜ ಬೆಳೆಯುವುದಕ್ಕೆ ಇವೆಲ್ಲಾ ಆತಂಕವಾಗಿವೆ, ಇವೆಲ್ಲಾ ಕಂಟಕಸ್ವರೂಪವೆಂಬುದಾಗಿ ಎಲ್ಲರೂ ಯೋಚನೆ ಮಾಡುತ್ತಿದ್ದಾರೆ. ಆದರೆ ಈ ವಿಚಾರದ ಬಗ್ಗೆ ಏನೇನು ನಡೆದಿದೆ ಎಂಬುದಾಗಿ ಯೋಚನೆ ಮಾಡಿದರೆ ಇದುವರೆಗೂ ಏನೂ ನಡೆದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿರತಕ್ಕ ಶ್ರೀ ನಂದಾ ಅವರು ಇದನ್ನು ಅತಿ ಶೀಘ್ರವಾಗಿ ನಿರ್ಮೂಲ ಮಾಡದಿದ್ದರೆ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆಂದು ಹೇಳಿದರು. ಆದ್ದರಿಂದ ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಪ್ರಯತ್ನ ಮಾಡುತ್ತೇನೆ. ಶ್ರೀಮಾನ್ ನಂದಾ ಅವರು ತಮ್ಮ ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಿ ಭಾರತದ ಮಹಾ ಪ್ರಧಾನಿಯಾಗಿದ್ದಂಥ ದಿವಂಗತ ಶ್ರೀ ಲಾಲ್ ಬಹದೂರ್ ಶಾಸ್ತ್ರಿಯವರ ಬಳಿ ಹೋದಾಗ, ಶ್ರೀ ಶಾಸ್ತ್ರಿಯವರು, ನಿಲ್ಲಿ, ಯೋಚನೆಮಾಡಿ, ಆತುರ ಪಡಬೇಡಿ, ನಾವು, ನೀವು ಎಲ್ಲರೂ ಸೇರಿ ಆ ವಿಚಾರವಾಗಿ ಪ್ರಯತ್ನ ಮಾಡೋಣವೆಂಬುದಾಗಿ ಹೇಳಿದರು.

ಕೇಂದ್ರ ಸರ್ಕಾರದವರು ಈ ವಿಷಯವನ್ನು ಸುದೀರ್ಘವಾಗಿ ಯೋಚನೆ ಮಾಡಿದಂಥ ಮಂತ್ರಿ ಮಂಡಲವು ಶ್ರೀ ನಂದಾರವರಿಗೆ ವಿರುದ್ಧವಾಗಿತ್ತು. ಅವರು ಭಾರತ ಸೇವಕ ಸಮಾಜದ ಅಧ್ಯಕ್ಷರಾಗಿ ಈ ಒಂದು ವಿಷಯವನ್ನು ಸುದೀರ್ಘವಾಗಿ ಪರಿಶೀಲನೆ ಮಾಡಿ ಇದರಲ್ಲಿರತಕ್ಕಂಥ ತೊಡಕುಗಳನ್ನು ತೆಗೆದು ಹಾಕಬೇಕು ಎಂದು ಪ್ರತಿಜ್ಞೆ ಮಾಡಿದರು. ಸಮಾಜದಲ್ಲಿರತಕ್ಕಂಥ ಸಮಾಜ ಘಾತುಕತನ ನಿರ್ಮೂಲವಾದರೆ ಬಹಳ ಸುಭದ್ರವಾದ ಬುನಾದಿಯಮೇಲೆ ಒಳ್ಳೆಯ ಸಮಾಜವನ್ನು ಕಟ್ಟಬಹುದು. ಇನ್ನು ಕೆಲವರು ಹೇಳುತ್ತಾರೆ, ಇದು ಬರೀ ಹಿಂದೂಸ್ಥಾನದಲ್ಲಿ ಒಂದರಲ್ಲೇ ಇಲ್ಲ, ಮೈಸೂರು ರಾಜ್ಯದಲ್ಲಿ ಒಂದರಲ್ಲೇ ಇಲ್ಲ, ಅಮೇರಿಕಾ ದೇಶದಲ್ಲೂ ಇದೆ, ಗ್ರೇಟ್ ಬ್ರಿಟನ್ನಿನಲ್ಲೂ ಇದಕ್ಕಿಂತಲೂ ದೊಡ್ಡದಾಗಿದೆ ಎಂದು. ಆದರೆ, ಅಮೇರಿಕಾದಲ್ಲಿ ಆಗಲಿ, ಗ್ರೇಟ್ ಬ್ರಿಟನ್‌ನಲ್ಲಿಯಾಗಲಿ ಅದು ಎಷ್ಟರಮಟ್ಟಿಗೆ ಇದೆಯೆಂದು ತಿಳಿಯದು. ಆದ್ದರಿಂದ ನಮ್ಮ ಕಣ್ಣುಮುಂದೆ ಇರುವ ವಿಷಯಗಳನ್ನು ಪರಿಶೀಲನೆ ಮಾಡಿದರೆ, ಅದು ಇಷ್ಟು ಭೂತಾಕಾರವಾಗಿ, ಬೃಹದಾಕಾರವಾಗಿ ಇರುವುದರಿಂದ ಈ ಭ್ರಷ್ಟಾಚಾರ ಹೋಗುವುದಕ್ಕೆ ಸಾಧ್ಯವೇ, ಇದಕ್ಕೆ ಏನು ಪ್ರಯತ್ನ ಮಾಡಬೇಕು ಎನ್ನುವುದಾದರೂ ಈಗಿನ ಪ್ರಶ್ನೆ. ಅದಕ್ಕೆ ನಮ್ಮ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ, ಇವತ್ತಿನ ದಿವಸ ಯಾವುದೇ ಪಕ್ಷಕ್ಕೆ ಸೇರಿರಲಿ, ಯಾವುದೇ ಗುಂಪಿಗೆ ಸೇರಿರಲಿ, ಎಲ್ಲೇ ಇರಲಿ, ಎಷ್ಟೇ ದೊಡ್ಡವರಾಗಿರಲಿ, ಸುದ್ದಿ ತಿಳಿದಾಗ ಇದನ್ನು ಪರಿಪಕ್ವವಾಗಿ ಪರಿಶೀಲನೆ ಮಾಡತಕ್ಕದ್ದು ಎಂದು. ಇದನ್ನು ಮಾಡಿದರೆ, ತಮಗೆ ಒಳ್ಳೆಯದು, ಸಮಾಜಕ್ಕೆ ಒಳ್ಳೆಯದು, ಆಗಲೇ ಸುಭದ್ರವಾದ ಒಂದು ಸಮಾಜವನ್ನು ಕಟ್ಟುವುದಕ್ಕೆ ಸಾಧ್ಯ.

ಸ್ವಾಮಿ, ವಿಜಿಲೆನ್ಸ್ ಕಮಿಷನ್ ಎಂದು ಮಾಡಿ ಆ ವಿಜಿಲೆನ್ಸ್ ಕಮಿಷನ್‌ಗೆ ತಾವು ಬೇಕಾದಂಥ ಅಂಗಾಂಗಗಳನ್ನು ಜೋಡಿಸಿದ್ದೀರಿ, ಕೇಂದ್ರ ಸರ್ಕಾರದವರೇ ಈ ವಿಜಿಲೆನ್ಸ್ ಕಮಿಷನ್ ಮಾಡಿದ್ದಾರೆ. ಅದಕ್ಕೆ ಒಂದು ದೊಡ್ಡ ಪೋಲಿಸ್ ಖಾತೆಯನ್ನು ಹಾಗೂ ಸಿಬ್ಬಂದಿಯನ್ನು ಸೇರಿಸಿದ್ದಾರೆ. ಇವತ್ತು ಅಲ್ಲಿ ನಡೆದಿರತಕ್ಕಂಥ ಕೆಲಸವನ್ನು ನೋಡಬೇಕಾಗಿದೆ. ಕೇಂದ್ರ ಸರ್ಕಾರದ ಬಗ್ಗೆ ಈ ವಿಷಯ ಮಾತನಾಡುವುದಕ್ಕೆ ಈ ಸಭೆಗೆ ಅದು ಸಾಧ್ಯವಿಲ್ಲದೆ ಇದ್ದರೂ ಇಲ್ಲಿ ಏನು ನಡೆದಿದೆಯೆಂದು ಯೋಚನೆ ಮಾಡಿದರೆ ಇದರ ಬಗ್ಗೆ ಯಾರೂ ಕೂಡ ದೀರ್ಘವಾಗಿ ಯೋಚನೆ ಮಾಡಿದ ಹಾಗೆ ಕಾಣಲಿಲ್ಲ. 1917ರಲ್ಲಿ ಭಾರತವು ಸ್ವಾತಂತ್ರ್ಯಗಳಿಸಿದಮೇಲೆ ಇವತ್ತಿನವರೆಗೂ ಎಲ್ಲಾ ಕ್ಷೇತ್ರಗಳಲ್ಲೂ ನಡೆದಿರತಕ್ಕಂಥ ವಿಧ್ಯಮಾನಗಳನ್ನು ನೋಡೋಣ. ರಾಜಕೀಯ ಕ್ಷೇತ್ರಕ್ಕೇ ಹೋಗಿ, ಕೈಗಾರಿಕಾ ಕ್ಷೇತ್ರಕ್ಕೇ ಹೋಗಿ, ವಿದ್ಯಾಭ್ಯಾಸ ಕ್ಷೇತ್ರಕ್ಕೇ ಹೋಗಿ, ಯಾವುದೇ ಕ್ಷೇತ್ರದಲ್ಲಿ ಏನಾದರೂ ಪರಿಶುದ್ಧತೆ ಇದೆಯೇ ಅಲ್ಲಿ ಕೆಲಸ ಸುಲಲಿತವಾಗಿ ನಡೆದಿದೆಯೇ ಎಂದರೆ ಅದನ್ನು

ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗಾದರೆ ಯಾರೇ ಒಬ್ಬರು ಜವಾಬ್ದಾರಿಯಿಂದ ಕೆಲಸ ಮಾಡ ತಕ್ಕದ್ದೂ ಸಹ ಕಹಿಯಾಗಿ ಕಾಣುತ್ತದೆ. ಯಾರಾದರೂ ಒಳ್ಳೆಯ ಕೆಲಸ ಮಾಡಿದರೆ ಅದನ್ನು ಕೊಂಡಾಡುವುದಕ್ಕೆ ಸಾಧ್ಯ. ಆದರೆ ಯಾರಾದರೂ ಒಬ್ಬನಿಗೆ ನೀನು ಜೀವನ ಸರಿಯಾಗಿ ನಡೆಸಿಲ್ಲ ವೆಂದು ಹೇಳಿದರೆ ಅದು ಅವನಿಗೆ ಕಹಿಯಾಗಿ ಕಾಣುತ್ತದೆ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಆದ್ದರಿಂದ ಈಗಿನ ಭ್ರಷ್ಟಾಚಾರವನ್ನು ನಿರ್ಮೂಲ ಮಾಡತಕ್ಕದ್ದು ಸರ್ಕಾರದ ಕೈಯಲ್ಲಿಯೇ ಸಾಧ್ಯವಿಲ್ಲ. ಸರ್ಕಾರದವರು 10 ವಿಜಿಲೆನ್ಸ್ ಕಮಿಷನ್ ನೇಮಕ ಮಾಡಿದರೂ ಸಾಧ್ಯವಿಲ್ಲ. ಇನ್ನೂ 100 ಜನ ಅಧಿಕಾರಿಗಳನ್ನು ಅದಕ್ಕೆ ಸೇರಿಸಿದರೂ ಸಾಧ್ಯವಿಲ್ಲ. ಏಕೆಂದರೆ ಸಮಾಜದಲ್ಲಿ ಅನೇಕ ಲೋಪದೋಷಗಳು ಇವೆ. ಲೋಪದೋಷಗಳು ಸರಿಯಾದ ಹೊರತು ನಾವು ಹೇಳತಕ್ಕಂಥ ಭ್ರಷ್ಟಾಚಾರ ಹೋಗುವುದಿಲ್ಲ. ರಾಷ್ಟ್ರ ಅದನ್ನು ಬೇಡ ಎಂದರೂ ಸಹ ಹೋಗುವುದಿಲ್ಲ. ಭ್ರಷ್ಟಾಚಾರ ನಿರ್ಮೂಲನಕ್ಕೆ ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಇದಕ್ಕೆ ಬಡತನವೇ ಮೂಲಕಾರಣ, ಮತ್ತು ನಿರುದ್ಯೋಗವೇ ಮೂಲ ಕಾರಣ, ಅದಕ್ಕಾಗಿ ಹೊಟ್ಟೆತುಂಬ ಅನ್ನ ಮೈತುಂಬ ಬಟ್ಟೆ, ಕೈತುಂಬ ಕೆಲಸ ಕೊಡಿ. ಅದಕ್ಕೆ ಮೂಲ ಕಾರಣರು ಯಾರು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇಂಡಸ್ಟ್ರಿಯಲಿಸ್ಟ್ ಆಗಲಿ, ಮಂತ್ರಿಮಂಡಲ ದವರಾಗಲೀ, ಅಧ್ಯಕ್ಷರಾಗಲೀ ಅಥವಾ ಯಾರೇ ಆಗಲಿ, ಒಂದು ಸೈಟ್ ತೆಗೆದುಕೊಂಡು ಮನೆ ಕಟ್ಟಿದರೆ ಅಷ್ಟಕ್ಕೇ ಅದನ್ನು ನಾವು ಭ್ರಷ್ಟಾಚಾರವೆಂದು ಹೇಳುತ್ತೇವೆ. ಅದಕ್ಕೆ ಇಲ್ಲಸಲ್ಲದ ಬಣ್ಣ ಕೊಡುವುದಾದರೆ, ಇವತ್ತಿನ ದಿವಸ ಯಾರೂ ಮನೆ ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರವಾಗಿ ಇಂತಹ ಒಂದು ಸಂಶಯಾತ್ಮಕವಾದ ಜಗತ್ತಿನಲ್ಲಿ ಯಾರು ವಾಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ನಾನಾದರೂ ಈ ಸರ್ಕಾರಕ್ಕೆ ಹೇಳುತ್ತೇನೆ. ಸಮಾಜದಲ್ಲಿರತಕ್ಕ ಈ ಮೂರು ಭೂತಗಳನ್ನು ನಿರ್ಮೂಲ ಮಾಡುವುದಕ್ಕೆ ಈ 3 ಪಂಚವಾರ್ಷಿಕ ಯೋಜನೆ ಮುಗಿದರೂ ಕೂಡ ಇವತ್ತಿನ ದಿವಸ ನಮ್ಮ ಆದಾಯ ಸರಿದೂಗಿಸುವುದಕ್ಕೆ ಸಾಧ್ಯವಾಗಿಲ್ಲ. ಅಲ್ಲದೆ, ಇನ್ನು 5 ಪಂಚವಾರ್ಷಿಕ ಯೋಜನೆಗಳು ಆದರೂ ಕೂಡ ಈ ಸಮಸ್ಯೆ ನಮ್ಮ ಬೆನ್ನು ಬಿಟ್ಟಿದ್ದಲ್ಲ. ಸರ್ಕಾರದ ವರು ಮೊದಲನೆ, ಎರಡನೆ, ಮತ್ತು ಮೂರನೆ ಪಂಚವಾರ್ಷಿಕ ಯೋಜನೆಗಳಲ್ಲಿ ಏನು ಕಾರ್ಯಗತ ಮಾಡಬೇಕು ಎಂಬುದನ್ನು ಭಾರತದ ಮಹಾ ಪ್ರಧಾನಿಯವರಾಗಿದ್ದ ದಿವಂಗತ ಶ್ರೀ ಜವಹರ್‌ಲಾಲ್ ನೆಹರೂ ಅವರು ಹೇಳಿದ್ದು ಏನೆಂದರೆ ಬಡತನ ನಿರ್ಮೂಲ ಮಾಡಬೇಕು, ಹಸಿವಿನಿಂದ ನರಳುತ್ತ ಇರತಕ್ಕಂಥ ಜನರನ್ನು ವಿಮುಕ್ತಿಗೊಳಿಸಬೇಕು, ಅನ್ನ ಕೊಡಬೇಕು, ಔಷಧೋಪಚಾರ ಕೊಡಬೇಕು, ಆದಾಯ ವೆಚ್ಚ ಸರಿದೂಗಬೇಕು, ಇಲ್ಲದೆ ಹೋದರೆ ಅಂಥ ಸರ್ಕಾರ ಅಧಿಕಾರದಲ್ಲಿರುವುದಕ್ಕೆ ಸರಿ ಯಲ್ಲವೆಂದು. ಇವತ್ತಿನ ದಿವಸ ಸರ್ಕಾರದವರು 3 ಪಂಚವಾರ್ಷಿಕ ಯೋಜನೆಗಳನ್ನು ಮುಗಿ ಸಿದ್ದರೂ, ಅದಕ್ಕಾಗಿ ಸಹಸ್ರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೂ ಕೂಡ, ಇವತ್ತಿನ ಆರ್ಥಿಕಾಭಿವೃದ್ಧಿ ಕಡೆಗೆ ಎಷ್ಟು ದೂರ ಸರ್ಕಾರದವರು ಗಮನ ಕೊಟ್ಟಿದ್ದಾರೆಂದು ನಾನು ಮಾನ್ಯ ಸದಸ್ಯರ ಗಮನವನ್ನು ಸೆಳೆಯಬೇಕಾಗಿದೆ. 3 ಪಂಚವಾರ್ಷಿಕ ಯೋಜನೆಗಳು ಮುಗಿದಿದ್ದರೂ, ಇವತ್ತು ಒಂದು ಹಿಡಿ ಕೂಳಿಗಾಗಿ, ಒಂದು ಹಿಡಿ ಅನ್ನಕ್ಕಾಗಿ ಬೇರೆ ದೇಶಗಳನ್ನು ನಾವು ಬೇಡು ತ್ತಿದ್ದೇವೆ. ಅಕ್ಕಿ, ರಾಗಿ, ಮತ್ತು ಗೋಧಿ ಬೇಕಾದರೆ, ಕೆರೆ ಕಟ್ಟಬೇಕಾದರೆ, ಒಂದು ಮನೆ ಕಟ್ಟ ಬೇಕಾದರೆ ಪರಕೀಯರನ್ನು ಅವಲಂಬನೆ ಮಾಡಿದ್ದೇವೆ. 18 ವರ್ಷಗಳಿಂದಲೂ ಆಡಳಿತ ವಹಿಸಿರ ತಕ್ಕಂಥ ಈ ಪಕ್ಷ ಅಭಿವೃದ್ಧಿ ಕೆಲಸಗಳಿಗೆ ಏನಾದರೂ ಪ್ರಯತ್ನ ಮಾಡಿದ್ದಾರೆಯೇ ಎಂದರೆ ಏನೂ ಇಲ್ಲ. ಒಂದು ವೇಳೆ ಸರ್ಕಾರದವರು ಖರ್ಚು ಮಾಡಿದ ಹಣದಿಂದ ಏನಾದರೂ ದೇಶಕ್ಕೆ ಉಪ ಯೋಗವಾಗಿದ್ದರೆ ನಾನು ಇಲ್ಲಿ ಈ ವಿಚಾರಗಳನ್ನು ಹೇಳತಕ್ಕ ಪ್ರಸಂಗವೇ ಇರಲಿಲ್ಲ. ಆಡಳಿತ ಪಕ್ಷ ಒಂದೇ ಅಲ್ಲ, ಸಮಾಜದಿಂದಲೂ ಜನರಿಗೆ ಚೆನ್ನಾಗಿ ಅಭಿವೃದ್ಧಿಯಾಗಬೇಕು. ಹೇಗೆ ರೊಟ್ಟಿಗೆ ಹಾಕುವ ಹಿಟ್ಟು ಚೆನ್ನಾಗಿಲ್ಲದಿದ್ದರೆ ಕೆಟ್ಟ ವಾಸನೆ ಬರುತ್ತದೋ ಹಾಗೆಯೇ ಸರ್ಕಾರ ಸರಿಯಾಗಿ ಹೋದರೆ ಮಾತ್ರ ಸಮಾಜದ ಪ್ರತಿನಿಧಿಗಳಿಗೂ ಮತ್ತು ಸರ್ಕಾರಕ್ಕೂ ಒಳ್ಳೆಯದಾಗುತ್ತದೆ. ಇಂಥ ಒಳ್ಳೇ ಕೆಲಸಕ್ಕೆ ಕೈಹಾಕದೆ ತಮ್ಮ ತಮ್ಮೊಳಗೆ ಯಾದವೀ ಕಲಹ ಮಾಡಿಕೊಂಡರೆ ಈ ರಾಷ್ಟ್ರದ ಆಡಳಿತ ಮಟ್ಟವನ್ನು ಕೆಳಕ್ಕೆ ಇಳಿಸಲು ಕಾರಣವಾಗುತ್ತದೆ. ಇದರಿಂದ ಯಾವತ್ತು ಸಮಾಜಕ್ಕೆ ಒಳ್ಳೆಯ ದಾಗುವುದಿಲ್ಲ. ಈ ರೀತಿಯೇ ಇದ್ದರೆ ಇದನ್ನು ಯಾರ ಕೈಯಿಂದಲೂ ಸುಧಾರಣೆ ಮಾಡಲು ಸಾಧ್ಯ ವಿಲ್ಲವೆಂದು ನಾನಾದರೂ ಹೇಳುತ್ತೇನೆ. ಈ ಒಂದು ಸಮಸ್ಯೆ ಮಹಾಭಾರತ ಯುದ್ಧದಿಂದಲೇ ಪ್ರಾರಂಭವಾಯಿತು. ಹೇಗೆಂದರೆ ಶ್ರೀಕೃಷ್ಣ ಬಲರಾಮರೇ ಒಂದೊಂದು ಪಕ್ಷ ವಹಿಸಿದರು. ಬಲರಾಮನು 11 ಅಕ್ಷೋಹಿಣಿ ಸೈನ್ಯದೊಂದಿಗೆ ಕೌರವರ ಪಕ್ಷ ವಹಿಸಿದ, ಶ್ರೀಕೃಷ್ಣನು ಪಾಂಡವರ ಪಕ್ಷಕ್ಕೆ ಸೇರಿದ, ಆದ್ದರಿಂದ ನನಗನ್ನಿಸುತ್ತದೆ, ಎಂದು ಮಹಾಭಾರತದ ಕುರುಕ್ಷೇತ್ರದ ಯುದ್ಧ ಪ್ರಾರಂಭವಾಯಿತೋ ಅಂದಿನಿಂದಲೇ ಈ ಸಮಾಜದ ದುರವ್ಯವಹಾರ ಪ್ರಾರಂಭವಾಯಿತೆಂದು. ಇವತ್ತಿನ ದಿವಸ ಈ ಭ್ರಷ್ಟಾಚಾರದ ಬುನಾದಿಗೆ ಕಾರಣವೇನು ಎಂಬುದನ್ನು ಅಧಿಕಾರದಲ್ಲಿರ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ತಕ್ಕಂಥವರು ಮೊದಲು ಯೋಚನೆ ಮಾಡಬೇಕು. ತಾವು ಯೋಚನೆ ಮಾಡದೆ ಇನ್ನೊಬ್ಬರಿಗೆ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಇಂಥ ಒಂದು ಸಮಿತಿ ಮಾಡುವುದು ಒಳ್ಳೆಯದೆಂದು ತಿಳಿದುಕೊಂಡಿದ್ದೇನೆ. ಆದರೆ ಸಮಿತಿ ಮಾಡುವುದರಿಂದಲೇ ನಿಜಕ್ಕೂ ಇದು ಹೋಗುವುದಿಲ್ಲ. ಒಂದು ಸಾರಿ ಶ್ರೀ ನಂದರವರು ಹೇಳಿದರು, ರಾಷ್ಟ್ರದಲ್ಲಿರುವ ಎಲ್ಲಾ ಸನ್ಯಾಸಿಗಳನ್ನು ಕರೆಸಿಬಿಡುತ್ತೇನೆ, ಅವರೆಲ್ಲಾ ಕೂಡಿ ಮೊದಲು ಅವರ ಮನೆ ಮುಂದೆ ಟೆಂಟ್ ಹಾಕಿಕೊಂಡು ಇರುತ್ತಾರೆ. ಕುಂದುಕೊರತೆಗಳೇನಾದರು ಇದ್ದರೆ ಅವುಗಳನ್ನು ಅರ್ಜಿ ಮೂಲಕ ಕೋಡಿಯೆಂದು ಶ್ರೀ ನಂದರವರು ಜನರಿಗೆ ಹೇಳಿದರು. ಏಕೆಂದರೆ ಅವರು ಸನ್ಮಾರ್ಗಿಗಳು ಮತ್ತು ಚೆನ್ನಾಗಿ ಕೆಲಸಮಾಡುತ್ತಾರೆಂದು ಹೇಳಿದರು. ಆದರೆ ನಾನು ಕೇಳುತ್ತೇನೆ, ಇದು ಸಾಧುಸಂತರ ಕೈಯಲ್ಲಿ ಮಾಡಲು ಸಾಧ್ಯವೇ? ನಾವು ಕೇಳಿದ್ದೇವೆ, ಎಷ್ಟೋ ಜನ ಸಾಧುಸಂತರೆಂದು ಹೇಳಿಕೊಂಡು ಮಂತ್ರ ಹಾಕುತ್ತೇವೆ, ಯಂತ್ರ ಹಾಕುತ್ತೇವೆ, ಮಕ್ಕಳು ಇಲ್ಲದಿದ್ದರೆ ಮಕ್ಕಳು ಹುಟ್ಟುವ ಹಾಗೆ ಮಾಡುತ್ತೇವೆಂದು ಹೇಳಿಕೊಂಡು ಬಹಳ ಜನರಿಗೆ ಮೋಸಮಾಡಿ ಒಡವೆವಸ್ತುಗಳನ್ನು ದೋಚಿಕೊಂಡು ಹೋಗಿರುವ ವಿಚಾರ ಎಲ್ಲರಿಗೂ ಗೊತ್ತಿದೆ. 3 ವಿಚಾರಗಳನ್ನು ತಾವು ಪರ್ಯಾಲೋಚನೆ ಮಾಡಬೇಕು, ಏನೆಂದರೆ ಎಲ್ಲರಿಗೂ ಹೊಟ್ಟೆ ತುಂಬ ಅನ್ನ, ಮೈತುಂಬ ಬಟ್ಟೆ, ಔಷದೋಪಚಾರ ಮತ್ತು ಕೈತುಂಬ ಕೆಲಸ ಕೊಡಿ, ಆಗ ಕೆಲಸ ಚೆನ್ನಾಗಿ ನಡೆಯುತ್ತದೆ. ಒಬ್ಬ ಕಾನ್ಸ್‌ಟೇಬಲ್ 4 ಅಣೆ ಲಂಚ ತಿಂದ, ಒಬ್ಬ ಸಬ್‌ರಿಜಿಸ್ಟ್ರಾರ್ ಒಂದು ರೂಪಾಯಿ ಲಂಚ ತಿಂದ ಎಂದು ನಾವು ಕೇಳುತ್ತೇವೆ. ಆದರೆ ನಾವು ಒಬ್ಬ ಕಾನ್ಸ್‌ಟೇಬಲ್ಲಿಗೆ 80 ರೂಪಾಯಿ ಸಂಬಳ ಕೊಡುತ್ತೇವೆ, ಒಬ್ಬ ಸಬ್‌ರಿಜಿಸ್ಟ್ರಾರ್‌ಗೆ 120 ರೂಪಾಯಿ ಸಂಬಳ ಕೊಡುತ್ತೇವೆ, ಈ ಸಣ್ಣ ಸಂಬಳದಲ್ಲಿ ಅವರು ಮಕ್ಕಳ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಸಾಧ್ಯವೇ? ಅಕ್ಕಿ, ಬೇಳೆ ಕೊಂಡುಕೊಳ್ಳುವುದಕ್ಕೆ ಸಾಧ್ಯವೇ? ಮನೆ ಬಾಡಿಗೆ ಕಟ್ಟುವುದಕ್ಕೆ ಸಾಧ್ಯವೆ?

10-00 A.M.

ದಿನೇ ದಿನೇ ಮೆಷನರಿ ಬೆಳೆಯುತ್ತಿದೆ. ಹೊಸ ಹೊಸ ಖಾತೆಗಳು ಮತ್ತು ಹೊಸ ಹೊಸ ಅಧಿಕಾರಿಗಳ ಗುಂಪು ಬೆಳೆಯುತ್ತಿದೆ. ಇದರಿಂದ ಕೆಲಸದಲ್ಲಿರತಕ್ಕ ಕನಿಷ್ಟ ವೇತನವನ್ನು ಪಡೆಯತಕ್ಕ ನೌಕರ ವರ್ಗದವರೇನಿದ್ದಾರೆ ಅವರು ಒಂದು ದುರ್ಮಾರ್ಗಕ್ಕೆ ಒಂದು ದುಶ್ಚಟಕ್ಕೆ ಕೈಹಾಕುತ್ತಾರೆ. ಅದಕ್ಕೋಸ್ಕರ ಸರ್ಕಾರದವರು ಇದನ್ನೆಲ್ಲವನ್ನೂ ಯೋಚನೆ ಮಾಡಬೇಕು. ಸರ್ಕಾರದವರು ಇದಕ್ಕಾಗಿ 100 ಕಮಿಟಿಗಳನ್ನು ಮಾಡಿ ನೂರು ವ್ಯವಹಾರ ಮಾಡಿದರೂ ಮತ್ತು ಈ ವಿಷಯವನ್ನು ಈ ಸಭೆಯಲ್ಲಿ ಇನ್ನೂ ಒಂದು ವರ್ಷ ಚರ್ಚೆ ಮಾಡಿದರೂ ಕೂಡ ಇದಕ್ಕೆ ಪರಿಹಾರ ದೊರೆಯುವುದಿಲ್ಲ. ನಮ್ಮ ದೇಶದ ಜನರ ಆರ್ಥಿಕ ಮಟ್ಟವನ್ನು ಅಭಿವೃದ್ಧಿ ಮಾಡಿ ಜನಗಳು ತಮಗೆ ಏನು ಬೇಕೆಂದು ಹೇಳುತ್ತಾರೆಯೋ ಯಾವ ವಸ್ತು ಬೇಕೆಂದು ಕೇಳುತ್ತಾರೆಯೋ ಅದು ಅವರಿಗೆ ಶೀಘ್ರವಾಗಿ ದೊರೆಯುವ ಸೌಲಭ್ಯವನ್ನು ಒದಗಿಸುವ ಏರ್ಪಾಡನ್ನು ಸರ್ಕಾರದವರು ಮಾಡಿದರೆ ಮಾತ್ರ ಸಮಾಜ ಚೆನ್ನಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೋಸ್ಕರವಾಗಿ ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಒಂದು ಸಮಿತಿಯನ್ನು ನೇಮಕ ಮಾಡಿ ಆ ಸಮಿತಿಯವರು ಅದರ ಬಗ್ಗೆ ಏನು ಒಂದು ವರದಿಯನ್ನು ಕೊಡುತ್ತಾರೆಯೋ ಅದನ್ನು ಪರಿಶೀಲನೆ ಮಾಡಿ ಆಡಳಿತದಲ್ಲಿ ಎಲ್ಲಿ ಮೂಲಭೂತವಾದ ತಪ್ಪು ಇದೆ ಎಂಬುದನ್ನು ಕಂಡುಹಿಡಿದು ಅದಕ್ಕೆ ತಕ್ಕ ಪರಿಹಾರ ಮಾರ್ಗವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿದೆ ಎಂದು ನನ್ನ ಭಾವನೆ. ಒಂದು ವೇಳೆ ಸರ್ಕಾರದವರು ಆ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿ ಆ ಸಮಿತಿಯವರು ತಮ್ಮ ವರದಿಯನ್ನು ಕೊಟ್ಟು ಅದರ ಮುಖಾಂತರ ಆಡಳಿತದಲ್ಲಿರುವ ಲೋಪದೋಷಗಳನ್ನು ಸರಿಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಒಂದು ಭಾವನೆ ಇದ್ದರೆ ಸರ್ಕಾರದವರು ಇಂಥಾ ಒಂದು ಹೆಜ್ಜೆಯನ್ನು ಮುಂದೆ ಇಟ್ಟು ಅದನ್ನು ಏತಕ್ಕೆ ಪರೀಕ್ಷೆ ಮಾಡಬಾರದು? ಮದ್ಯಪಾನ ನಿಷೇಧ ತೆಗೆದು ಹಾಕಬೇಕೆಂದು ಶ್ರೀಮನ್ನಾರಯಣ್ ಮತ್ತು ಶ್ರೀ ತೇಕ್‌ಚಂದ್ ಅವರ ಸಮಿತಿಯನ್ನು ಕೇಂದ್ರ ಸರ್ಕಾರದವರು ನೇಮಕ ಮಾಡಿದರು. ಆದರೆ ಅದರಲ್ಲಿ ಏನೇನೋ ಎಡರು ತೊಡರುಗಳು ಬಂದುವು. ಮತ್ತು ಆ ಬಗ್ಗೆ ರಾಜ್ಯದಲ್ಲಿ ಏನೇನೋ ನಾನಾ ರೀತಿಯ ಆಂದೋಳನಗಳು ನಡೆಯುತ್ತಿವೆ.

Mr. SPEAKER.—I want to know how many more members are desirous of participating. If there are some more members, time has to be extended.

(Some Hon'ble Members said that they would like to participate.)

Mr. SPEAKER.—Time is extended for the rest of the day.

HON'BLE MEMBERS.—Yes.

Mr. SPEAKER.—The chair has received intimation that there has been some change in the parties. I have considered the matter and also re-allocated the seats. On Monday, I hope the Hon'ble Members will be in the seats allotted to them.

Next thing, about the Whips, I do not want the whips to be sleeping till the last minute. There is one whole day before them.

The House will now rise to re-assemble after half-an-hour.

The House adjourned for Recess at Five Minutes past Ten of the Clock and re-assembled at Forty Minutes past Ten of the Clock.

[MR. DEPUTY SPEAKER in the Chair].

† ಶ್ರೀ ಎಸ್. ಗೋಪಾಲ ಗೌಡ.—ಸ್ವಾಮೀ, ಮಾನ್ಯ ಶ್ರೀ ಹೆಚ್. ಆರ್. ಕೇಶವಮೂರ್ತಿಯವರು ಮಂಡಿಸಿರುವ ಈ ನಿರ್ಣಯಕ್ಕೆ ನನ್ನ ಬೆಂಬಲವನ್ನು ನೀಡುತ್ತ ಈ ಸಂದರ್ಭದಲ್ಲಿ ಈ ನಿರ್ಣಯ ಎಷ್ಟು ಅವಶ್ಯಕ ಮತ್ತು ಅಗತ್ಯವಾದ ಒಂದು ಬೇಡಿಕೆಯಾಗಿದೆ ಎನ್ನುವುದನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಹಿಂದೆ ರಾಜ ಮಹಾರಾಜರುಗಳ ಕಾಲದಲ್ಲಿ ಸಾರ್ವಜನಿಕ ಜೀವನದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯತಕ್ಕ ಜನರು ಯಾವ ರೀತಿ ಇರಬೇಕು ಎನ್ನುವುದರ ಬಗ್ಗೆ ಕೆಲವು ಕಾನೂನು ಕಾಯಿದೆ ಸಂಪ್ರದಾಯಗಳು ಇದ್ದವು. ಪ್ರಜಾಪ್ರಭುತ್ವದಲ್ಲಿ ಈಗ ಆಡಳಿತ ವರ್ಗದವರು ಎಂದು ನಾವು ಏನು ಹೇಳಬಹುದು, ಅವರ ಆಚಾರ, ವ್ಯವಹಾರಗಳ ಬಗ್ಗೆ ಕಾನೂನು ಬದ್ಧವಾದ ಯಾವ ಸಂಹಿತೆಯೂ ಈ ದೇಶದಲ್ಲ ಇನ್ನೂ ರೂಪಿತವಾಗಿಲ್ಲ. ಇರತಕ್ಕಂತಹ ಕ್ರಿಮಿನಲ್ ಪ್ರೊಸೀಜರು ಕೋಡ್‌ನ ಪ್ರಕಾರ ಈ ವಿಷಯದ ಬಗ್ಗೆ ನ್ಯಾಯಾಲಕ್ಕೆ ಹೋಗಿ ನ್ಯಾಯವನ್ನು ದೊರಕಿಸಿಕೊಳ್ಳತಕ್ಕ ಅವಕಾಶ ಇದರಲ್ಲಿ ಇಲ್ಲ. ಈ ಹದಿನೆಂಟು ವರ್ಷಗಳಲ್ಲಿ ದೇಶ ಸ್ವತಂತ್ರವಾದ ಮೇಲೆ ಪ್ರಜಾಪ್ರಭುತ್ವದ ರೀತಿ ನೀತಿಗಳನ್ನು ಜನ ಕಣ್ಣಲ್ಲಿ ಕಣ್ಣಿಟ್ಟು ಅವಲೋಕಿಸಿ ತಮ್ಮ ಕಟು ಅನುಭವದಿಂದ ಮತ್ತು ಪ್ರತ್ಯಕ್ಷ ಪ್ರಮಾಣಗಳಿಂದ ಆಡಳಿತ ವರ್ಗದವರಲ್ಲಿ ಇರತಕ್ಕಂತಹ ಜನರು ಸ್ವಾರ್ಥ ಸಾಧಕರಾಗಿದ್ದಾರೆ, ಅಪ್ರಾಮಾಣಿಕರಾಗಿದ್ದಾರೆ, ದೇಶದ ಜನತೆ ಇವರ ಕೈಯಲ್ಲಿ ಕೊಟ್ಟ ಅಧಿಕಾರವನ್ನು ಹಣವನ್ನು ತಮ್ಮ ಸ್ವಾರ್ಥಕ್ಕೆ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎನ್ನತಕ್ಕ ಸಾಮಾನ್ಯವಾದ ಒಂದು ತೀರ್ಮಾನಕ್ಕೆ ಬಂದು ಬಿಟ್ಟಿದ್ದಾರೆ. ಇದು ಒಂದು ದೊಡ್ಡ ಭಾರಿ ಕಳಂಕ ಆಡಳಿತವರ್ಗದವರ ಮೇಲೆ ಬಂದಿರತಕ್ಕದ್ದು. ಇದನ್ನು ಆಡಳಿತ ವರ್ಗದವರ ಹಿತದೃಷ್ಟಿಯಿಂದ ಆಗಾಗ ಜನತೆಯ ಮುಂದೆ ಸ್ಪಷ್ಟವಾಗಿ ತೊಳೆದುಕೊಳ್ಳುವುದು ಬಹಳ ಅವಶ್ಯಕ. ಇಲ್ಲವಾದಲ್ಲಿ ಯಾವಾಗಲೂ ಪ್ರತಿನಿಧಿಗಳು ಅಥವಾ ನಾಯಕರು ಎಂದರೆ, ಪುಡಾರಿಗಳು ಎಂದು ನಾವು ಕೆಲವು ನಾಯಕರಿಗೆ ಹೇಳುತ್ತೇವೋ ಅಂತಹವರು ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅವಶ್ಯಕವಾಗಿ ಬೇಕಾಗುತ್ತದೆ. ಅವರನ್ನು ಬಿಟ್ಟು ಬೇರೆ ನೇರವಾದ ಮತ್ತೊಂದು ಮಾರ್ಗವೇ ಇಲ್ಲ. ಆದುದರಿಂದ ಅವರ ವೈಯುಕ್ತಿಕ ಚಾರಿತ್ರ್ಯದ ಬಗ್ಗೆ ಶಂಕೆ ಜನರಲ್ಲಿ ಬರುವುದಾದರೆ ಅದರಿಂದ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಹಾಳಾಗುತ್ತದೆ. ಅಲ್ಲದೆ ಅಧಿಕಾರವನ್ನು, ಸರಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುವುದರ ಜೊತೆಗೆ ಅಧಿಕಾರಿ ವರ್ಗದವರು ಆಡಳಿತವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎನ್ನುವ ಅಪಾದನೆಗಳಿಗೂ ಒಳಗಾಗಬೇಕಾಗುತ್ತದೆ. ಹಿಂದೆ ಕೇಂದ್ರ ಸರಕಾರದವರು ಒಂದು ಆದೇಶವನ್ನು ಕೊಟ್ಟರು. ಕಾಂಗ್ರೆಸ್ ಕೂಡ ಆ ತತ್ವವನ್ನು ಮಾನ್ಯ ಮಾಡಿದೆ. ಮಂತ್ರಿ ಪದವಿಗಳನ್ನು ಹೊಂದಿರತಕ್ಕವರು ತಮ್ಮ ಆದಾಯ ವೆಚ್ಚಗಳು ಹಾಗೂ ಆಸ್ತಿಪಾಸ್ತಿಗಳ ವಿಷಯಗಳ ವಿವರಗಳನ್ನು ಕೊಡಬೇಕೆಂದು ಹೇಳಿದ್ದರು. ಈಚೆಗೆ ಕೇಂದ್ರ ಸರಕಾರದವರು

(ಶ್ರೀ ಎಸ್. ಗೋಪಾಲಗೌಡ)

ಪ್ರಕಟಪಡಿಸಿರತಕ್ಕ ವರದಿಯ ಪ್ರಕಾರ ನೋಡುವಾಗ ಇನ್ನೂ ಅನೇಕ ರಾಜ್ಯಗಳಲ್ಲಿ ಅನೇಕ ಮಂತ್ರಿಗಳು ತಮ್ಮ ಆಸ್ತಿಪಾಸ್ತಿಗಳ ವಿವರಗಳನ್ನು ಕೊಟ್ಟಿಲ್ಲ ಎಂದು ಅವರು ಹೇಳಿದ್ದಾರೆ. ಈ ನಿರ್ಣಯ ವ್ಯಾಪಕವಾಗಿದೆ, ಕೇವಲ ಮಂತ್ರಿಗಳ ಮತ್ತು ಮಾಜಿ ಮಂತ್ರಿಗಳ ಬಗ್ಗೆ ಮಾತ್ರವಲ್ಲ. ಶಾಸಕರು ಹಾಗೂ ಕೆಲವು ಸ್ಟ್ಯಾಟುಟರಿ ಬೋರ್ಡುಗಳ ಅಧ್ಯಕ್ಷರುಗಳು, ಸದಸ್ಯರುಗಳು ಇತ್ಯಾದಿ ಎಲ್ಲರೂ ಕೂಡ ತಮ್ಮ ಆಸ್ತಿಪಾಸ್ತಿಗಳ ಬಗ್ಗೆ ಅವರು ಹೇಳಿಕೆಯನ್ನು ಕೊಡಬೇಕು ಎನ್ನುವ ಅಭಿಪ್ರಾಯವೂ ಇದರಲ್ಲಿದೆ. ಎಲ್ಲ ವರ್ಗಗಳವರ ಬಗೆಗೂ ಇದರಲ್ಲಿ ಹೇಳಿರುವುದನ್ನು ಮನಗಾಣ ಬಹುದಾಗಿತ್ತು. ಈಗಾಗಲೇ ತಿಳಿಸಿರುವಂತೆ ಇಡೀ ಆಡಳಿತ ವರ್ಗದವರಮೇಲೆ ಬಂದಿರತಕ್ಕ ಶಂಕೆಗಳನ್ನು ತೊಳೆದುಕೊಳ್ಳುವುದಕ್ಕಾಗಿ ಒಂದು ವಿಚಾರಣಾ ಆಯೋಗವನ್ನು ರಚನೆ ಮಾಡಿ ಅದು ಕಾಲ ಕಾಲಕ್ಕೆ ಅದರ ವಿವರಗಳನ್ನು ಕ್ರಮವಾದ ರೀತಿಯಲ್ಲಿ ಸಾರ್ವಜನಿಕರ ಮುಂದೆ ಇಡುವುದಕ್ಕೆ ಒಂದು ಅವಕಾಶವನ್ನು ಕೊಡಬೇಕು. ಇವೊತ್ತು ಭ್ರಷ್ಟಾಚಾರ ಎಂದು ಹೇಳತಕ್ಕ ಒಂದು ಅಪಾದನೆ ವೈರಸ್ ಜಾಡ್ಯದಂತೆ ಈ ಒಂದು ವರ್ಗದವರಮೇಲೆ ಹರಡಿದೆ. ಇದನ್ನು ನಿಷ್ಠುರವಾಗಿ ಪ್ರಾಮಾಣಿಕತೆಯಿಂದ ತೊಡೆದು ಹಾಕುವುದಕ್ಕೆ ನಾವು ಪ್ರಯತ್ನ ಮಾಡುವುದು ಬಹಳ ಅವಶ್ಯಕ ಎನ್ನುವ ಮಾತನ್ನು ಇಲ್ಲಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮೀ, ದೇಶದಲ್ಲಿ ಭ್ರಷ್ಟಾಚಾರದ ಬಗ್ಗೆ ಸಾರ್ವತ್ರಿಕವಾಗಿ ಕಾನೂನು ಮಾಡಲು ಬಂದಾಗ, ಮುಂಧ್ರಾ ಪ್ರಕರಣ, ಕೈರಾನ್ ಪ್ರಕರಣ, ಇಂತಹ ಪ್ರಕರಣಗಳ ವಿಚಾರಣೆ ನಡೆದಮೇಲೆ, ದೇಶದ ಬಹುಪಾಲು ಮಂತ್ರಿಮಂಡಲಗಳಮೇಲೆ ಅಲ್ಲಿನ ಶಾಸಕರುಗಳು ಮಹತ್ತರವಾದ ಅಪಾದನೆ ಗಳನ್ನು ಮಾಡಿದ್ದಾರೆ. ಕೇಂದ್ರದ ಗೃಹಶಾಖಾ ಸಚಿವರು ಎರಡು ವರ್ಷಗಳಲ್ಲಿ ಭ್ರಷ್ಟಾಚಾರವನ್ನು ನಾನು ನಿರ್ಮೂಲ ಮಾಡುತ್ತೇನೆ, ಇಲ್ಲದೆ ಇದ್ದರೆ ನಾನು ಅಧಿಕಾರವನ್ನು ಬಿಟ್ಟು ಹೋಗುತ್ತೇನೆ ಎನ್ನುವಂಥ ಒಂದು ಆಶ್ವಾಸನೆಯನ್ನು ದೇಶಕ್ಕೆ ಕೊಟ್ಟಿದ್ದರು. ಈ ಎರಡು ವರ್ಷಗಳು ಗತಿಸಿ ಹೋದುವು. ಗೃಹ ಮಂತ್ರಿಗಳು ಅಧಿಕಾರವನ್ನು ತ್ಯಜಿಸಲಿಲ್ಲ ತ್ಯಜಿಸುತ್ತೇವೆಂದು ಹೇಳಿದರು. ಇಂದು ಅಧಿಕಾರವನ್ನು ತ್ಯಜಿಸುವ ಅವಶ್ಯಕತೆ ಇಲ್ಲ ಎಂದು ಯಾರೋ ಭರವಸೆ ಕೊಟ್ಟರು ಎಂದು ವರದಿಗಳಿಂದ ಕೇಳುತ್ತೇವೆ.

ಇತ್ತೀಚೆಗೆ ಸಂತಾನಂ ಅವರು ಒಂದು ಲೇಖನವನ್ನು ಬರೆದು ಈ ವಿಷಯದ ಬಗ್ಗೆ ಬಹಳ ಸಮಂಜಸವಾದ ಮತ್ತು ಎಲ್ಲರೂ ಅನುಸರಿಸಬೇಕಾದ ಕೆಲವು ಸಲಹೆಗಳನ್ನು ಕೊಟ್ಟಿರುತ್ತಾರೆ. ಹತ್ತು ಜನ ಶಾಸಕರು ಸಹಿ ಮಾಡಿ ಖಚಿತವಾದ, ನಿರ್ದಿಷ್ಟವಾದ ಅಪಾದನೆಗಳನ್ನು ಯಾರ ಮೇಲಾದರೂ ಹೊರಿಸಿದರೆ ಅವರಮೇಲೆ ವಿಚಾರಣೆ ಆಗಲೇಬೇಕು ಎನ್ನುವ ನೀತಿಯನ್ನು ನಾವು ಅನುಸರಿಬೇಕು ಎನ್ನುವುದು ಅವರ ಅಭಿಪ್ರಾಯ ಮುಂದುವರಿದು ಅವರು ಹೇಳುತ್ತಾರೆ. ಎರಡು ವರ್ಷವಲ್ಲ, 20 ವರ್ಷಗಳಲ್ಲಿ ಈ ಕಲುಷಿತ ವಾತಾವರಣವನ್ನು ನಾವು ತೊಡೆದು ಹಾಕುವುದಕ್ಕೆ, ಸರಿಪಡಿಸುವುದಕ್ಕೆ ಸಾಧ್ಯವಾದರೆ ಅದೂ ಸಹ ಒಂದು ದೊಡ್ಡ ಯಶಸ್ಸು ಸಾಧನೆಯಾದೀತು ಎಂದು ಅವರು ಆಶಿಸುತ್ತಾರೆ. ನಾವು ಹತ್ತು ಜನರಲ್ಲ, 25-30 ಜನರು, ಶಾಸಕರು, ಈ ಮಾನ್ಯ ಸಭೆಯ ಶಾಸಕರು ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲದಮೇಲೆ ಕೆಲವು ಅಪಾದನೆಗಳನ್ನು ಮಾಡಿದೆವು; ಈ ಮಾನ್ಯ ಸಭೆಯಲ್ಲಿ ಮಾಡಿದವು; ಹೊರಗಡೆ ಮಾಡಿದೆವು; ಸಾಲದ್ದಕ್ಕೆ ಈ ದೇಶದ ಉಚ್ಚ ಅಧಿಕಾರ ವನ್ನು ಹೊಂದಿರತಕ್ಕ ರಾಷ್ಟ್ರಾಧ್ಯಕ್ಷರಿಗೆ ಈ ಮನವಿಯನ್ನು ಸಲ್ಲಿಸಿದರೂ ಯಾರೋ ವಿಚಾರಣೆ ಮಾಡದೆ ಆ ಮನವಿಯಲ್ಲಿ ಏನಿದೆ ಎನ್ನುವುದನ್ನು ಕೂಡ ನೋಡದೆ ಪಾರಸ್ಪರಿಕವಾಗಿ ತಮಗೆ ಮಂತ್ರಿ ಮಂಡಲ ದಲ್ಲಿ ಇರತಕ್ಕ ಜನರ ಬಗ್ಗೆ ಇರಬಹುದಾದ ವಿಶ್ವಾಸವನ್ನು ಆಧಾರವಾಗಿ ಇಟ್ಟುಕೊಂಡು ಅಪಾದನೆ ಗಳಲ್ಲಿ ಏನೂ ಹುರುಳಿಲ್ಲವೆಂದು ಕಾಣುತ್ತದೆ ಎಂದು ಪಾರ್ಲಿಮೆಂಟಿನಲ್ಲಿ ಎಲ್ಲೋ ಒಂದು ಸಲ, ಪತ್ರಿಕೆಗಳಿಗೆ ಒಂದು ಸಲ ಹೇಳಿಕೆಯನ್ನು ಕೊಟ್ಟು ಈ ಅಪಾದನೆಗಳ ಪಟ್ಟಿಯಮೇಲೆ ತಿಪ್ಪೆ ಸಾರಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಇವತ್ತು ನನ್ನಂಥವರು ಜನತೆಯ ಮುಂದೆ ತಲೆ ತಗ್ಗಿಸಿ ನಿಲ್ಲತಕ್ಕ ಪ್ರಸಂಗವಾಗಿದೆ ಇದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು) :—ಸ್ವಾಮಿ, ಕ್ಯಾಬಿನೆಟ್ ದರ್ಜೆಯ ಮಂತ್ರಿಗಳು ಒಬ್ಬರೂ ಸಭೆಯಲ್ಲಿಲ್ಲ. ಸಾಲದ್ದಕ್ಕೆ ಅಪಾದನೆಗಳನ್ನು ಯಾರ ಮೇಲೆ ಮಾಡುತ್ತಿದ್ದೇವೆಯೋ ಅವರು ಆ ಅಪಾದನೆಗಳನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಇಲ್ಲಿಲ್ಲ. ಅಪಾದನೆಗಳನ್ನು ಹೊತ್ತುಕೊಳ್ಳತಕ್ಕ ಅಪರಾಧಿಗಳು ಇಲ್ಲದೆ ಇರುವುದರಿಂದ ನಾವು ಚಾರ್ಜಸ್ ಮಾಡಿದರೆ ಅವರ ಕಡೆ ವಾದ ಮಾಡುವ ಜನರೂ ಇಲ್ಲ.

ಉಪಾಧ್ಯಕ್ಷರು.—ಉಪಮಂತ್ರಿಗಳು ಸಭೆಯಲ್ಲಿದ್ದಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅವರು ನಮಗೆ ಏನೂ ಗೊತ್ತಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಸ್. ಗೋಪಾಲ ಗೌಡ.—ಈ ವಿಷಯದಲ್ಲಿ ನಾನು ವಿಶೇಷ ವಿಷಾದದಿಂದ ಹೇಳಬೇಕಾಗಿದೆ, ಇಂಥ ಗಂಭೀರವಾದ ಹಾಗೂ ಮಹತ್ವಪೂರ್ಣವಾದ ಅಪಾದನೆಗಳನ್ನು ಕ್ಷುಲ್ಲಕವೆಂದು ಬಣ್ಣಿಸಿ ಅವುಗಳಿಲ್ಲಿ ಹುರುಳಿಲ್ಲ ಎಂದು ತಾವೇ ತೀರ್ಮಾನಕ್ಕೆ ಬಂದು ತಿರಸ್ಕರಿಸತಕ್ಕದ್ದು, ಭ್ರಷ್ಟಾಚಾರಕ್ಕೆ ಕೊಡತಕ್ಕ ಸ್ವಾಗತ, ಪ್ರೋತ್ಸಾಹ ಮತ್ತು ಪುರಸ್ಕಾರ ಎಂದು ನಾವು ತೀರ್ಮಾನಕ್ಕೆ ಬರಬೇಕಾಗುತ್ತದೆ. ಮತ್ತು ಎಂಥ ಕಣ್ಣಲ್ಲಿ ಕಂಡಂಥ, ಸತ್ಯವಾಗಿ ನಡೆಧಿರತಕ್ಕ ಸಂಗತಿಯಾದರೂ ಅದನ್ನು ನಾವು ಪ್ರಕಟವಾಗಿ, ಜವಾಬ್ದಾರಿಯಿಂದ ಹೇಳುವಾಗ ನಾವು ವಿಚಾರ ಮಾಡಬೇಕಾಗುತ್ತದೆ. ಈ ದೇಶದಲ್ಲಿ ನ್ಯಾಯ ದೊರೆಯುವುಧಿಲ್ಲ, ನಾವು ಕೂಗುವುದು ಅರಣ್ಯ ರೋದನವಾಗುತ್ತದೆ, ಈ ದೇಶದಲ್ಲಿ ನ್ಯಾಯ, ಸತ್ಯ, ನೀತಿ ನಿಯಮಗಳ ಪರಿಪಾಲನೆ ಇಲ್ಲ ಎನ್ನುವ ತೀರ್ಮಾನಕ್ಕೆ ನಾವು ವಿಷಾದದಿಂದ ಬರಬೇಕಾಗುತ್ತದೆ. ಅದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದವರು ಇವತ್ತು ಎಡೆ ಮಾಡಿಕೊಟ್ಟಿದ್ದಾರೆ. ಆದುದರಿಂದಲೇ ನಾನು ಹೇಳುವುದು ಈ ಸಾರ್ವಜನಿಕ ಜೀವನದಲ್ಲಿ ತುಂಬಿರತಕ್ಕ ಹೊಲಸು ಮತ್ತು ಕೊಳೆಯನ್ನು ಸ್ವಚ್ಛಪಡಿಸಬೇಕಾದರೆ ನಿಷ್ಠುರವಾದ ನೀತಿನಿಯಮಗಳನ್ನು ನಾವು ಪರಿಪಾಲನೆ ಮಾಡಬೇಕಾದುದು ನಮ್ಮ ಆದ್ಯ ಕರ್ತವ್ಯ.

ದಿವಂಗತ ಶಾಸ್ತ್ರಿಯವರ ಬಗ್ಗೆ ನಾನು ಇವತ್ತು ನಮ್ಮ ಮೆಚ್ಚುಗೆಯನ್ನು, ದೇಶದ ಕೃತಜ್ಞತೆಯನ್ನು ಹೇಳಬೇಕು. ಕೇಂದ್ರದ ಹಣಕಾಸಿನ ಸಚಿವರ ಮೇಲೆ ಪುನಃ ಅಪಾದನೆಗಳು ಬಂದವು. ಈ ಅಪಾದನೆಗಳಲ್ಲಿ ಹುರುಳಿಲ್ಲ ಎಂದು ಹೇಳಿ ನನ್ನನ್ನು ಮುಕ್ತನನ್ನಾಗಿ ಮಾಡಿ, ಇಲ್ಲದೆ ಹೋದರೆ ನಾನು ರಾಜಿನಾಮೆ ಕೊಡುತ್ತೇನೆ, ಅದನ್ನು ಅಂಗೀಕರಿಸಿ ಎಂದು ಅವರು ಬೆದರಿಕೆಯನ್ನು ಹಾಕಿದರು. ಆ ಸಂದರ್ಭದಲ್ಲಿ ದಿವಂಗತ ಶಾಸ್ತ್ರಿಯವರು ದೇಶಕ್ಕೆ ಒಂದು ದೊಡ್ಡ ಮಾರ್ಗದರ್ಶಿಯಾಗತಕ್ಕ ಕೆಲಸವನ್ನು ಮಾಡಿದರು. ಆ ರಾಜಿನಾಮೆಯ ಬೆದರಿಕೆಗೆ ಅವರು ಹೆದರಲಿಲ್ಲ. ನಾನು ಈ ಅಪಾದನೆಗಳನ್ನು ಉಚ್ಚ ನ್ಯಾಯಾಲಯದ ನ್ಯಾಯ ಮೂರ್ತಿಗಳ ಮುಂದೆ ಇಟ್ಟು ಅವರ ಸಲಹೆ ಪಡೆದು ನಂತರ ಆ ವಿಷಯದಲ್ಲಿ ತೀರ್ಮಾನಕ್ಕೆ ಬರುತ್ತೇನೆ ; ಇದು ಸಂಪ್ರದಾಯ ; ಅದನ್ನು ನಾನು ಪರಿಪಾಲನೆ ಮಾಡಬೇಕಾಗುತ್ತದೆ ; ಮಾಡುತ್ತೇನೆ ಎಂದು ಹೇಳಿದರು. ಆಗ ಹಣಕಾಸಿನ ಸಚಿವರು ಅನಿವಾರ್ಯವಾಗಿ ರಾಜಿನಾಮೆ ಇತ್ತರು. ಇನ್ನೂ ಆ ಅಪಾದನೆ ಪಟ್ಟಿ ವಿಚಾರಣೆ ಆಗಬೇಕಾದ್ದಿದೆ. ಆ ರೀತಿ ಅವರು ದೇಶದ ಹಣವನ್ನಾಗಲೀ, ಅಧಿಕಾರವನ್ನಾಗಲೀ, ತಮ್ಮ ಹಿತಕ್ಕಾಗಿ, ತಮ್ಮವರ ಹಿತಕ್ಕಾಗಿ ದುರುಪಯೋಗಪಡಿಸಿಕೊಂಡಿದ್ದರೆ ಅವರಿಗೆ ಶಿಕ್ಷೆ ಆಗಬೇಕಾದ್ದು ಇದೆ. ಅದನ್ನು ನಾವು ಪರ್ಯಾಲೋಚನೆಗೆ ಕೇಂದ್ರ ಸರ್ಕಾರಕ್ಕೆ ಬಿಡೋಣ. ಆದರೆ ಈ ನಿಷ್ಠೂರವಾದ ನೀತಿಯನ್ನು ತಳೆಯುವ ವಿಷಯದ ಬಗ್ಗೆ, ಆ ಒಂದು ತತ್ವವನ್ನು ಒಪ್ಪಿಕೊಳ್ಳತಕ್ಕ ಬಗ್ಗೆ ಇವತ್ತು ನಮಗೆ ಧೈರ್ಯ ಬೇಕು. ಕಾರಣ ಪ್ರಜಾಪ್ರಭುತ್ವವನ್ನು, ಪ್ರತಿನಿಧಿಗಳ ಸರ್ಕಾರವನ್ನು ಜನತೆ ಮನ್ನಿಸಿ ಒಪ್ಪಬೇಕಾದರೆ ಯಾವ ನಂಬಿಕೆಯನ್ನು ಸರ್ಕಾರದಲ್ಲಿ ಇಟ್ಟಿರುತ್ತಾರೆಯೋ,—ಜನತೆ ಒಂದು 'ಟ್ರಸ್ಟ್' ಎಂದು ಈ ಪ್ರತಿನಿಧಿಗಳ ಕೈಯಲ್ಲಿ ಕೊಟ್ಟಿರುತ್ತಾರೆ—ಅದು ಸುರಕ್ಷಿತವಾಗಿದೆ, ಅದು ದುರುಪಯೋಗವಾಗುವುದಿಲ್ಲ, ಅದನ್ನು ಅವರು ತಮ್ಮ ಸ್ವಾರ್ಥಕ್ಕಾಗಿ ಬಳಸುವುದಿಲ್ಲ ಎನ್ನುವ ನಂಬಿಕೆಯನ್ನು ಪ್ರತಿಯಾಗಿ ನಾವು ಜನತೆಗೆ ಕೊಡಬೇಕು. ಹಾಗೆ ಕೊಡದೆ ಇದ್ದಲ್ಲಿ ನಾವು ಅವರ ವಿಶ್ವಾಸಕ್ಕೆ ಪಾತ್ರರಾಗುವುದಿಲ್ಲ, ಅರ್ಹರಾಗುವುದಿಲ್ಲ.

ಇವತ್ತು ಅನೇಕ ದೇಶಗಳಲ್ಲಿ ಆಡಳಿತ ವರ್ಗದವರು ಈ 18 ವರ್ಷಗಳಲ್ಲಿ ತಮ್ಮ ಅಧಿಕಾರ ಹಾಗೂ ಸಾರ್ವಜನಿಕ ಹಣವನ್ನು ಎಷ್ಟೊಂದು ರೀತಿಯಲ್ಲಿ ದುರುಪಯೋಗ ಪಡಿಸಿಕೊಂಡಿದ್ದಾರೆ ಎನ್ನುವುದರ ಬಗ್ಗೆ ಸಹಸ್ರಾರು ಕಥೆಗಳನ್ನು ನಾವು ಕೇಳುತ್ತೇವೆ. ಕೆಲವೊಮ್ಮೆ ದಿಗ್ಭ್ರಮೆಯಾಗುತ್ತದೆ ನಮಗೆ. ಹಾಗೆ ಕೇಳಿದ ಮಾತುಗಳನ್ನು ಪುನಃ ಬೇರೆಯವರಿಗೆ ಹೇಳುವುದಕ್ಕೆ ಭಯವಾಗುತ್ತದೆ. ಕೊಯಮತ್ತೂರಿನಲ್ಲಿ ನೋಟುಗಳನ್ನು ತಯಾರು ಮಾಡುತ್ತಾರಂತೆ, ಚಲಾವಣೆಯಲ್ಲಿ ಇದೆಯಂತೆ, ನೂರು ರೂಪಾಯಿ ನೋಟುಗಳು 50 ರೂಪಾಯಿ, 60 ರೂಪಾಯಿಗಳಿಗೆ ಸಿಕ್ಕುತ್ತವಂತೆ, ಎಷ್ಟು ಕಥೆಗಳನ್ನು ನಾವು ಕೇಳಿದ್ದೇವೆ.

11-00 A.M.

ಹತ್ತು ವರ್ಷಗಳ ಕೆಳಗೆ ಅವರಿಗೆ ಏನೂ ಇರಲಿಲ್ಲವಂತೆ, ಇವತ್ತು ಬೆಂಗಳೂರಿನಲ್ಲಿ ಮುಂಬೈಯಲ್ಲಿ, ಎಲ್ಲಾ ಕಡೆಗಳಲ್ಲೂ ಮನೆಗಳನ್ನು ಕಟ್ಟಿದ್ದಾರಂತೆ. ಅವರ ಮಗ ಇಂಗ್ಲೇಂಡಿನಲ್ಲಿ ಇದ್ದಾರಂತೆ ಎಂದು ನಾವು ಎಷ್ಟೋ ಕಥೆಗಳನ್ನು ಕೇಳುತ್ತಿದ್ದೇವೆ. ಜನರು ಏನೋ ಹೊಟ್ಟೆಕಿಚ್ಚಿಗಾಗಿ ಆಡಳಿತ ವರ್ಗದವರ ಮೇಲೆ ಕಥೆಗಳನ್ನು ಕಟ್ಟುತ್ತಿದ್ದಾರೆಂದು ಭಾವಿಸುವುದಕ್ಕಾಗುವುದಿಲ್ಲ. ಬೆಂಕಿ ಇಲ್ಲದೆ ಹೊಗೆ ಏಳುವುದಿಲ್ಲ ಎನ್ನುವ ಮಾತು ಬಹಳ ಸತ್ಯ. ಅವಸ ಓಡಾಟದ ಬಿರುಸನ್ನು ನೋಡಿ ಬಹುಶಃ ಉತ್ಪ್ರೇಕ್ಷೆಯೆಂದು ಜನರು ಹೇಳಬಹುದು. ಆದರೆ ಮಾಡಿರುವುದು ನಿಜ. ಸಾರ್ವಜನಿಕ ಹಣದಿಂದ,

(ಶ್ರೀ ಎಸ್. ಗೋಪಾಲಗೌಡ)

ಷೇರುಗಳಿಂದ ಸಂಗ್ರಹಿಸಿರತಕ್ಕಂತಹ ಅಸಂಖ್ಯಾತ ಸಹಕಾರ ಸಂಘಗಳ ಹಣ ಇಂದು ಎಷ್ಟರಮಟ್ಟಿಗೆ ದುರುಪಯೋಗವಾಗುತ್ತಾ ಇದೆ, ಮತ್ತು ಆಗಿದೆ ಎನ್ನುವುದರ ಬಗ್ಗೆ ಈ ಮಾನ್ಯ ಸಭೆಯಲ್ಲಿ ನೂರಾರು ಪ್ರಶ್ನೆಗಳನ್ನು ಕೇಳಿದ್ದೇವೆ, ಹಾಕಿದ್ದೇವೆ, ಮತ್ತು ಸರ್ಕಾರದವರು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಕೆಲವು ಕಡೆ ಕ್ರಮಗಳನ್ನು ತೆಗೆದುಕೊಂಡಿರಬಹುದು. ಆದರೆ ಈ ಅವ್ಯಾವಹಾರಕ್ಕೆ ತಡೆ ಇರದೆ ಹೋದರೆ, ಇದನ್ನು ಕೊನೆಗಾಣಿಸದೆ ಹೋದರೆ, ಜನತೆಯಲ್ಲಿ ತಮ್ಮ ಆಡಳಿತದ ಬಗ್ಗೆ ತಮ್ಮ ಪ್ರತಿನಿಧಿಗಳ ಬಗ್ಗೆ ಮೂಲತಃ ನಂಬಿಕೆ ಹೋಗುತ್ತದೆ. ಆಗಲೇ ಪ್ರಜಾಪ್ರಭುತ್ವ ಸಾಯುವುದು. ಈ ಕಾರಣದಿಂದ ಇವತ್ತು ಶಾಸಕರಾಗಲೀ ಯಾವುದೇ ಮಂಡಲಿಯ ಅಧ್ಯಕ್ಷರಾಗಿರಲೀ, ಅಥವಾ ಮಂತ್ರಿಯಾಗಿರಲಿ, ಮತ್ತೊಬ್ಬರೇ ಆಗಿರಲಿ, ಯಾರೂ ಸಾರ್ವಜನಿಕ ಹಣವನ್ನು, ನಿಧಿಯನ್ನು, ಅದು ಗಾಂಧಿ ಸ್ಮಾರಕ ನಿಧಿಯೇ ಆಗಿರಲಿ, ಕಸ್ತೂರ್‌ಬಾ ನಿಧಿಯೇ ಆಗಿರಲಿ, ಅಥವಾ ನೆಹ್ರೂರವರ ನಿಧಿಯೇ ಆಗಿರಲಿ, ಅಥವಾ ಚಂದ್ರಶೇಖರ ಪಾಟೀಲರವರ ನಿಧಿಯೇ ಆಗಿರಲಿ, ಅಥವಾ ಮತ್ತೊಬ್ಬರ ನಿಧಿಯೇ ಆಗಿರಲಿ, ಸಾರ್ವಜನಿಕ ಹಣ ಮತ್ತು ಸರ್ಕಾರೀ ಬೊಕ್ಕಸ, ಇದನ್ನು ಎಷ್ಟರ ಮಟ್ಟಿಗೆ ನಾವು ವಿಚಕ್ಷಣತೆಯಿಂದ ನೋಡಿಕೊಳ್ಳಬೇಕಾದುದು ಎಂಬುದು ಬಹಳ ಪ್ರಾಮುಖ್ಯವಾದಂತಹ ವಿಷಯ. ಇದರ ಬಗ್ಗೆ ನಾವು ಬಹಳ ಸಲ ಹಗುರವಾಗಿ ಭಾವಿಸುತ್ತೇವೆ. ಅಧಿಕಾರವನ್ನು ಸಾರ್ವಭೌಮ ಸರ್ಕಾರದ ಹೆಸರಿನಲ್ಲಿ, ಪ್ರತಿನಿಧಿಗಳು ಚಲಾಯಿಸತಕ್ಕಂತ ಹೊಣೆಯನ್ನು ಹೊತ್ತಿರತಕ್ಕಂತಹ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ನಿಂದ ಹಿಡಿದು ದೇಶದ ದೊಡ್ಡ ಗೃಹಮಂತ್ರಿಗಳ ತನಕ, ಅವರು ಎಷ್ಟು ನಿಷ್ಪಕ್ಷಪಾತವಾಗಿ ಕೆಲಸವನ್ನು ನಿರ್ವಹಿಸುತ್ತಾರ ಎನ್ನುವುದರ ಮೇಲೆ ದೇಶದ ಆಡಳಿತದ ಬಗ್ಗೆ ಜನರಲ್ಲಿ ಗೌರವವಾಗಲೀ, ಮತ್ತು ಆದರವಾಗಲೀ ಉಂಟಾಗುತ್ತವೆ.

ಈಗ ಒಂದು ಕೇಸ್ ಹೇಳುತ್ತೇನೆ. ಒಬ್ಬ ಬಂಗಾರ ಮಾಡುವವನು ಬಂಗಾರ ಹಿಡಿದುಕೊಂಡು ಹೋಗುತ್ತಾ ಇದ್ದಾನೆ. ಪೋಲೀಸಿನವರು ಅದನ್ನು ವಶಪಡಿಸಿಕೊಂಡಿರುತ್ತಾರೆ. ಆ ಪೋಲೀಸಿನವರು ಆ ಬಂಗಾರವನ್ನು ತೆಗೆದುಕೊಂಡು ಪಾಕೀಸ್ತಾನಕ್ಕೆ ಹೊರಟು ಹೋಗುತ್ತಾನೆ. ಅವನು ಬಂಗಾರವನ್ನು ಕೊಡಿ ಅಥವಾ ಹಣವನ್ನು ಅದರೂ ಕೊಡಿ ಎಂದು ಕೇಸನ್ನು ಹಾಕಿದಾಗ ಆ ಪೋಲೀಸಿನವನು ಕಾನೂನು ಪ್ರಕಾರ ಏನು ತಪ್ಪು ಮಾಡಿಲ್ಲ. ಪುಸ್ತಕದಲ್ಲೂ ಅದು ಕ್ರಮವಾಗಿ ಆದರೂ ಇದ್ದಿರಲಿಲ್ಲ. ಬಂಗಾರವನ್ನು ಸರ್ಕಾರ ದುರುಪಯೋಗಪಡಿಸಿಕೊಂಡಿಲ್ಲ, ಅದನ್ನು ಹಿಂದಕ್ಕೆ ಕೊಡುವುದಕ್ಕಾಗುವುದಿಲ್ಲ, ಅಥವಾ ಪರಿಹಾರ ಕೊಡುವುದಕ್ಕಾಗುವುದಿಲ್ಲ ಎಂದು ಪೋಲೀಸ್ ಅಧಿಕಾರಿಗಳು ಹೇಳುತ್ತಾರೆ. ಬಹುಶಃ ಸುಪ್ರೀಮ್ ಕೋರ್ಟ್ ತೀರ್ಮಾನ ಮಾಡಿ ಇದರ ಬಗ್ಗೆ ಶ್ರೀ ಗಜೇಂದ್ರಗಡಕರ್‌ರವರು ಒಂದು ಮಾತು ಹೇಳಿದರು. ಇಂತಹ ಅಸಂಖ್ಯಾತ ವಿಷಯಗಳನ್ನು ಸಭೆಯ ಶಾಸಕರ ಗಮನಕ್ಕೆ ತೆಗೆದುಕೊಳ್ಳಬೇಕೆಂದು. ಇವತ್ತು ಕಾನೂನನ್ನು ನಿರ್ವಹಿಸತಕ್ಕಂತಹ ಅಧಿಕಾರಿಗಳು ಅಧಿಕಾರವನ್ನು ದುರುಪಯೋಗಪಡಿಸುವ ಸಂದರ್ಭದಲ್ಲಿ ನಾವು ಅವರಿಗೆ ಯಾವ ರೀತಿಯಲ್ಲಿ ಅಧಿಕಾರ ದುರುಪಯೋಗಪಡದಂತೆ ನಿರ್ಬಂಧಪಡಿಸಿದ್ದೇವೋ, ಅದಕ್ಕೆ ಏನು ಮಾರ್ಗವನ್ನು ಕಂಡುಹಿಡಿದಿದ್ದಾರೆಂದು ನಾವು ಬಹಳ ಗಹನವಾಗಿ ವಿಚಾರ ಮಾಡಿ, ಅದಕ್ಕೆ ಪರಿಹಾರ ಕಂಡುಹಿಡಿಯಬೇಕು. ಸ್ವಾಮಿ, ತಮಗೆ ಪತ್ರಿಕೆಯಲ್ಲಿ ನೋಡಿ ಗೊತ್ತಿರಬಹುದು, ಸರ್ಕಾರ 720 ಕ್ವಿಂಟಲ್ ಭತ್ತವನ್ನು ಒಂದು ಮಿಲ್ಲಿನಲ್ಲಿ ಇಟ್ಟಿದ್ದರು. ಮಿಲ್ಲಿನವನು ಕಾರ್ಪೋರೇಶನ್ (ಫುಡ್) ಏಜೆಂಟ್. ಒಂದು ಒಳ್ಳೆಯ ಬೆಳಿಗ್ಗೆ ಅವನು ಪೋಲೀಸಿಗೆ ದೂರು ಕೊಡುತ್ತಾನೆ. ಸರ್ಕಾರದವರು ಇಲ್ಲಿ ಇಟ್ಟಿದ್ದಂತಹ 720 ಕ್ವಿಂಟಲ್ ಭತ್ತ ಕಳವು ಆಗಿದೆಯೆಂದು. ಆ ಮಾಲೀಕ ಇನ್ನೂ ಗೌರವದಿಂದ ತಲೆಯೆತ್ತಿ ಇವತ್ತು ಓಡಾಡುತ್ತಿದ್ದಾನೆ. 720 ಕ್ವಿಂಟಲ್ ಭತ್ತಕ್ಕೆ ಇನ್ನೂ ವರದಿ ಬಂದಿಲ್ಲ. ಇದರ ಬಗ್ಗೆ ಸರ್ಕಾರದವರು ಡಿ.ಐ.ಆರ್. ಏನೂ ಉಪಯೋಗಕರವಾಗಿಲ್ಲ. ಇಂತಹ ಅನೇಕ ಪ್ರಕರಣಗಳು ನಮ್ಮ ರಾಜ್ಯದಲ್ಲಿ ನಡೆದಿವೆ. ಇಂತಹ ಸಹಸ್ರಾರು ಉದಾಹರಣೆಗಳನ್ನು ನಾನು ಕೊಡಬಲ್ಲೆನು. ದೊಡ್ಡ ದೊಡ್ಡ ಸಂದರ್ಭಗಳಲ್ಲಿ ಸ್ವಜನ ಪಕ್ಷಪಾತಕ್ಕೆ ಒಳಗಾಗಿ, ಸ್ವಾರ್ಥಕ್ಕೆ ಬಲಿಯಾಗಿ ಅಧಿಕಾರವನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳುವಂತಹ ಈ ಸಂದರ್ಭ ಇವತ್ತು ಸಂಪ್ರದಾಯವಾಗಿ ಬಂದಿದೆಯೋ ಏನೋ! ಉದ್ಯೋಗಗಳನ್ನು ಕೊಡುವಾಗ ಇವಕ್ಕೆ ಎಲ್ಲಿ ಕೊನೆ, ಹೇಗೆ ಕೊನೆ ಎನ್ನುವುದನ್ನು ನಾವು ಇವತ್ತು ನಮ್ಮನ್ನು ನಾವು ಪರೀಕ್ಷಿಸಿಕೊಂಡು ವಿಚಾರಮಾಡಬೇಕಾಗಿದೆ. ಜನರು ಒಡ್ಡತಕ್ಕಂತಹ ಅಪಾದನೆ ಎಂಬ ಅಗ್ನಿ ಏನಿದೆ, ಅದರಲ್ಲಿ ನಾವು ಪ್ರವೇಶ ಮಾಡಿ ಆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನಾವು ಸಾರ್ವಜನಿಕ ಕ್ಷೇತ್ರದಲ್ಲಿ ಬೆಳಗಬೇಕು ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಉಳಿಯಬೇಕು. ಇಲ್ಲವಾದರೆ ಈ ಕಳಂಕ ದೇಶದಲ್ಲಿರಕ್ಕಂತಹ ಆಡಳಿತ ವರ್ಗದವರೆಲ್ಲರೂ ಭ್ರಷ್ಟಾಚಾರ ಸ್ವಾರ್ಥ ಸಾಧಕರು, ಇವರು ದೇಶದ್ರೋಹ

ಮಾಡತಕ್ಕಂತವರು, ಇವರಿಗೆ ಜನತೆಯ ಹಿತದ ಬಗ್ಗೆ ಕಿಂಚಿತ್ತೂ ಆಸಕ್ತಿಯಿಲ್ಲ, ಇವರು ದೇಶವನ್ನು ಎಂದೂ ಉದ್ಧಾರಮಾಡುವವರಲ್ಲ ಎನ್ನತಕ್ಕಂತಹ ಒಂದು ಅಂತಿಮ ನಿರ್ಧಾರಕ್ಕೆ ಜನರು ಬರುತ್ತಾರೆ. ಆದ್ದರಿಂದ ಇಂತಹ ಕಾರ್ಯಗಳಿಗೆ ನಾವು ಕೊಡಲಿಯೇಟು ಕೊಡತಕ್ಕದ್ದು ಬಹಳ ಅಗತ್ಯ. ನಾನ ಸರ್ಕಾರದವರಲ್ಲಿ ಕಳಕಳಿಯಿಂದ ವಿನಂತಿ ಮಾಡಿ ಕೊಳ್ಳುವುದೇನೆಂದರೆ, ಎಂತಹ ಕಠಿಣ ಸಂದರ್ಭವೇ ಬರಲಿ. ಅದನ್ನು ನಿಷ್ಠೂರವಾಗಿ ನೀತಿ ನಿಯಮವನ್ನು ಆದರಿಸುವಂತೆ ಒಂದು ಸ್ಥೈರ್ಯದಿಂದ ಮನಸ್ಸನ್ನು ಬೆಳೆಸಿಕೊಳ್ಳೋಣ. ಇವತ್ತು ಮಾನ್ಯ ಮುಖ್ಯಮಂತ್ರಿಯಾಗಿದ್ದವರು ನಿಜವಾಗಿಯೂ ನಿರ್ಧಾಕ್ಷಿಣ್ಯಕ್ಕೆ ಅವಕಾಶ ಕೊಟ್ಟರೆ ಅಧಿಕಾರ ದುರುಪಯೋಗವಾಗ ವ ಸಂದರ್ಭವಿರುತ್ತದೆ. ಹಾಗೆ ಅಧಿಕಾರದಲ್ಲಿರತಕ್ಕ ಎಲ್ಲರಿಗೂ ಈ ಮಾತು ಅನ್ವಯಿಸುತ್ತದೆ. ಈ 18 ವರ್ಷಗಳಲ್ಲಿ ಈ ದೇಶದಲ್ಲಿ ಸಾರ್ವಜನಿಕ ಜೀವನದಲ್ಲಿ ಕಂಡು ಕೇಳಿ ಬರುತ್ತಿರತಕ್ಕಂತಹ ಸ್ವಾರ್ಥ ಸಾಧಕ ವೃತ್ತಿ ಏನಿದೆ, ಅದರ ಬಗ್ಗೆ ಈ ಮಾನ್ಯ ಸಭೆಯು ವಿಚಾರ ಮಾಡಬೇಕು. ಕೊನೆಗೆ ವಿಜಿಲೆನ್ಸ್ ಕಮಿಶನ್ ಎನ್ನತಕ್ಕಂತಹ ಒಂದು ಸಾಧನವನ್ನು ಕಂಡುಹಿಡಿದುಕೊಳ್ಳೋಣ ಎಂದು ಹೇಳಿ ಸಾರ್ವಜನಿಕ ಒತ್ತಾಯದಿಂದ ಸರ್ಕಾರದವರು ತೀರ್ಮಾನಕ್ಕೆ ಬಂದು ಕೇಂದ್ರದಲ್ಲೂ ಒಂದು ವಿಜಿಲೆನ್ಸ್ ಕಮಿಶನ್ ಸ್ಥಾಪನೆಯಾಯಿತು, ರಾಜ್ಯದಲ್ಲೂ ಒಂದು ವಿಜಿಲೆನ್ಸ್ ಕಮಿಷನ್ ಸ್ಥಾಪನೆಯಾಯಿತ್ತು. ಹಿಂದೆ ಆಂಟಿಕರಪ್ಷನ್ ಇಲಾಖೆಯೊಂದಿತ್ತು. ಆದರೆ ಅದು ಕೇವಲ ಅಧಿಕಾರಿಗಳ ದುರ್ನಡತೆ ಮತ್ತು ಭ್ರಷ್ಟಾಚಾರವನ್ನು ಮಾತ್ರ ಪರಿಶೀಲಿಸುತ್ತಿತ್ತು. ಅದು ಶಾಸಕರನ್ನು ಮಂತ್ರಿಗಳು ಮತ್ತು ಇರತ ಖಾಸಗಿ ಜನರನ್ನು ವಿಚಾರಣೆಗೆ ಗುರಿಪಡಿಸುವ ಅಧಿಕಾರವ್ಯಾಪ್ತಿಯನ್ನು ಪಡೆದಿರಲಿಲ್ಲ. ಆದರೆ ಇವತ್ತಿನ ವಿಜಿಲೆನ್ಸ್ ಕಮಿಷನ್‌ಗಳೂ ಕೂಡ ಇದುವರೆಗೆ ಮಾಡಿರುವ ಕೆಲಸವನ್ನು ನೋಡಿದರೆ ಅವು ಕೂಡ ಈ ಭ್ರಷಾಚಾರಗಳನ್ನು ಬಯಲಿಗೆಳೆಯುಂಅ ಶಕ್ತಿಯನ್ನು ಪಡೆದಿಲ್ಲವೆಂದು ಕಂಡು ಬರುತ್ತದೆ.

ಇನ್ನು ಸ್ವಾಮಿ, ಎನ್‌ಕ್ವೈರಿ ಆಕ್ಟ್ ಎಂಬ ಕೇಂದ್ರದ ಒಂದು ಆಕ್ಟ್ ಇದೆ. ಅದರಲ್ಲಿ ಬಹಳ ಕಟುವಾಗಿ ಪರಿಶೀಲನೆ ಮಾಡಬೇಕೆಂದು ಒತ್ತಾಯ ಬಂದಮೇಲೆ ಸರಕಾರದವರು ಒಬ್ಬರು ನ್ಯಾಯಾಧೀಶರನ್ನು ನೇಮಕ ಮಾಡಿದರು. ಕೈರಾನ್ ಬಗ್ಗೆ ಪಂಜಾಬಿನ ಶಾಸಕರು ಕೇಂದ್ರದಲ್ಲಿ ಒತ್ತಾಯ ಮಾಡಿದರು ಮತ್ತು ದಾಸ್ ಕಮಿಷನ್ ನೇಮಕವಾಯಿತ್ತು. ಆದರೆ ಕಮಿಷನ್ ಅಥವಾ ಆಯೋಗ ವರದಿ ಕೂಡ ಕೊಡುತ್ತದೆ. ಆದರೆ ಶಿಕ್ಷೆ ವಿಧಿಸಲು ಅದಕ್ಕೆ ಅಧಿಕಾರವಿಲ್ಲ. ಆ ವರದಿಯನ್ನು ಸರಕಾರ ಯಾವ ರೀತಿ ಬೇಕಾದರೂ ಜಾರಿಗೆ ಕೊಡಬಹುದು ಅಥವಾ ಕೊಡದಿರಬಹುದು. ಮಂಥ್ರಾ ಪ್ರಕರಣದಲ್ಲಿ ಕೊಟ್ಟ ಐತಿಹಾಸಿಕ ವರದಿಯೇನಿದೆ ಅದನ್ನು ಕೇಂದ್ರ ಪೂರ್ಣವಾಗಿ ಅಂಗೀಕಾರ ಮಾಡಲಿಲ್ಲ, ಅದನ್ನು ಕಾರ್ಯಗತ ಮಾಡಲಿಲ್ಲ. ಹಾಗೆಯೇ ದಾಸ್ ಕಮಿಷನ್ ವರದಿ ಸಂಬಂಧದಲ್ಲೂ ಕೂಡ ಆಯಿತು. ಯಾರಾದರೂ ಪರಿಶೀಲಿಸಿದರೆ ನಮ್ಮ ರಾಜ್ಯದಲ್ಲೂ ಮತ್ತು ಕೇಂದ್ರದಲ್ಲೂ ಇಂಥ ಅನೇಕ ಪ್ರಕರಣಗಳು ದೃಷ್ಟಿಗೆ ಬೀಳಬಹುದು. ತಮ್ಮವನೇ ಆದ ಒಬ್ಬ ಮನುಷ್ಯನನ್ನು ಅಷ್ಟು ನಿಷ್ಠೂರವಾಗಿ ಪರೀಕ್ಷೆಗೆ ಗುರಿಪಡಿಸುವುದು ಹೇಗೆ ಎಂದು ಆ ಒಂದು ವ್ಯಾಮೋಹದಿಂದಾಗಿ ಕೇಂದ್ರ ಹಾಗೂ ರಾಜ್ಯ ಸರಕಾರ ಬಹಳ ಸಲ ವರದಿಗಳನ್ನು ಕಾರ್ಯಗತ ಮಾಡಿರುವುದಿಲ್ಲ. ಅದುದರಿಂದ ಎನ್‌ಕ್ವೈರಿ ಆಕ್ಟ್ ಎಂದೇನಿದೆ ಅದನ್ನು ನಾವು ತಿದ್ದುಪಡಿ ಮಾಡಬೇಕು ಅಪಾದನೆ ಬಂದ ಮೇಲೆ ಅದು ಪತ್ರಿಕೆಯಲ್ಲಿ ಬರುತ್ತದೆ ; ಯಾವುದೋ ಪತ್ರಿಕೆಯಲ್ಲಿ ಬಂದರೆ ಯಾರಮೇಲೆ ಹೇಗೆ ಕ್ರಮ ತೆಗೆದುಕೊಳ್ಳುವುದು ಎಂದು ಹೇಳಬಹುದು. ಯಾರ ಮೇಲೆ ಆಪಾದನೆ ಪತ್ರಿಕೆಯಲ್ಲಿ ಬಂದಿರುತ್ತದೊ ಅವರು ತಪ್ಪಿತಸ್ಥರಲ್ಲದಿದ್ದರೆ ನ್ಯಾಯಾಸ್ಥಾನಕೆ ಅವರು ಹೋಗಿ ಯಾರು ಆಪಾದನೆ ಮಾಡಿದರೋ ಅವರ ಮೇಲೆ ಮಾನನಷ್ಟದ ಮೊಕದ್ದಮೆ ಹೂಡಬೇಕು. ಚಕ್ಕರ್‌ಪಾಲ ಎಂಬುವವರು ಮೊಖದ್ದಮೆ ಹೂಡಿದ, ಸಾರ್ವಜನಿಕ ಹಣವನ್ನು ದುರುಪಯೋಗ ಮಾಡಿದ್ದಾನೆ ಎಂದು ಹೇಳುವುದು ದ್ರೋಹವಾಯಿತು, ಅಲ್ಲಿ ಅದು ವಿದಿತವಾಯಿತ್ತು. ಹಾಗೆ ಅಂಥ ಪ್ರಕರಣಗಳನ್ನು ನಾವು ಇವತ್ತು ಎಷ್ಟೋ ಪತ್ರಿಕೆಗಳಲ್ಲಿ ನೋಡುತ್ತೇವೆ, ಗಂಭೀರವಾದ ಆಪಾದನೆ ಇರುತ್ತದೆ. ಕೆಲವು ಪತ್ರಿಕೆಗಳಲ್ಲಿ ಹೆಸರು, ತಾರೀಖು, ಸ್ಥಳ ಮುಂತಾದ್ದನ್ನೆಲ್ಲಾ ನಮೂದಿಸಿರುತ್ತಾರೆ. ಆದರೆ ಆ ಆಪಾದನೆ ಬಗ್ಗೆ ಎಷ್ಟು ತಾತ್ಸಾರವಿರುತ್ತದೆ ಎಂದರೆ ಆ ವಿಷಯ ತಮಗೆ ಸಂಬಂಧಪಟ್ಟಿಲ್ಲದಿರಬಹುದು ಎಂದು ಭಾವಿಸುತ್ತಾರೆ. ಮುಖ್ಯ ಮಂತ್ರಿಗಳ ಮೇಲೆ ಅಥವಾ ಬೇರೆ ಮಂತ್ರಿಗಳಮೇಲೆ ಆಪಾದಿಸಿ ಸ್ಥಳ ತಾರೀಖು, ನಡೆದ ವ್ಯವಹಾರ ಮುಂತಾದುವುಗಳ ಚಿತ್ರವನ್ನೆಲ್ಲಾ ಪ್ರಕಟಿಸಿದಮೇಲೆ ಸಂಬಂಧಪಟ್ಟವರು ಅದು ಸುಳ್ಳು ಅಥವ ನಿಜ ಎಂದು ನ್ಯಾಯಾಲಯಕ್ಕೆ ಹೋಗಿ ಅಥವಾ ಬೇರೆ ರೀತಿಯಲ್ಲಿ ತಿಳಿಸಬೇಕು. ಹಾಗೆ ಮಾಡದೆ ಸುಮ್ಮನೆ ಇರುವುದನ್ನು ನೋಡಿದರೆ ನಿಜವಾಗಿಯೂ ಅವರಿಗೆ ಮಾನವಿಲ್ಲವೇ, ಮರ್ಯಾದೆಯಿಲ್ಲವೇ ಅಥವಾ ಕಾನ್‌ಷನ್ಸ್ ಇಲ್ಲವೇ ಅವರಿಗೆ ಏನೂ ಅನ್ನಿಸುವುದಿಲ್ಲವೇ ಎಂದು ಆಶ್ಚರ್ಯವಾಗುತ್ತದೆ. ಒಂದುವೇಳೆ ಪತ್ರಿಕೆಯಲ್ಲಿ ಪ್ರಕಟಿಸುವವರು ತಮಗಿರುವ ಅವಕಾಶವನ್ನು ದುರುಪಯೋಗಪಡಿಸಿಕೊಂಡಿದ್ದರೆ ಅದನ್ನು ಸರಿಪಡಿಸುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಒಂದು ಗೊತ್ತಾದ ಚೌಕಟ್ಟಿನೊಳಗೆ ವ್ಯವಹಾರ ಮಾಡಬೇಕು. ಹಾಗೆ ಮಾಡದೆ ತನ್ನ ವಾಕ್ ಸ್ವಾತಂತ್ರ್ಯ

(ಶ್ರೀ ಎಸ್. ಗೋಪಾಲ ಗೌಡ)

ವನ್ನು ಯಾರಾದರೂ ದುರುಪಯೋಗಪಡಿಸಿಕೊಂಡಿದ್ದರೆ ಅವರಿಗೆ ಶಿಕ್ಷೆಯಿದೆ. ಆದರೆ ನಮ್ಮ ದೇಶದಲ್ಲಿ ವಿಚಿತ್ರ ರೀತಿಯಲ್ಲಿ ನಡೆಯುತ್ತಿದೆ. ಎಂಥ ಗಂಭೀರವಾದ ಆಪಾದನೆಗಳು ಬಂದರೂ ಅದರ ಬಗ್ಗೆ ಒಂದು ಚಕಾರ ಕೂಡ ಹೊರಗೆ ಬರುವುದಿಲ್ಲ, ಅದು ಸರಿಯೇ, ಸರಿಯಲ್ಲವೇ ಎಂದು ಜನರಿಗೆ ಒಂದು ಸಮಾಧಾನವಾಗುವಂತೆ ಒಂದು ಹೇಳಿಕೆ ಸಹ ಕೊಡುವುದಿಲ್ಲ. ಇದು ವಿಷಾದಕರ, ಅಲ್ಲದೆ ಅವಮಾನಕರ. ಲಾಲ್ ಬಹದ್ದೂರ್ ಶಾಸ್ತ್ರಿಗಳು ರೈಲ್ವೆ ಖಾತೆಯ ಮಂತ್ರಿಗಳಾಗಿದ್ದಾಗ ಅದಕ್ಕಾಗಿ ರಾಜೀನಾಮೆ ಕೊಟ್ಟರು. ಆದರೆ ಅವರ ಜೊತೆಯಲ್ಲಿ 30 ವರ್ಷಗಳು ಕೆಲಸ ಮಾಡಿದ್ದೇ ನೆಂದು ಹೇಳುವ ಜನರು ಅವರಂತೆ ಕೃತಿಯಲ್ಲಿ ಏನನ್ನೂ ತೋರಿಸುತ್ತಿಲ್ಲ. ಯಾವುದೇ ಸಂದರ್ಭದಲ್ಲೂ ರಾಜೀನಾಮೇ ಕೊಡಲಿಲ್ಲ ಅಥವಾ ವಿಷಾದವಾಗಲೀ ಪಶ್ಚಾತ್ತಾಪವಾಗಲಿ ಪಡಲಿಲ್ಲ, ಅವರ ಬಗ್ಗೆ ಬಂದಿರುವ ಆಪಾದನೆ ತಪ್ಪು ಎಂದು ಸಹ ಹೇಳಲಿಲ್ಲ. ಅವರಿಗೆ ಅಷ್ಟನ್ನು ಮಾಡುವ ಮನೋಧಾರ್ಢ್ಯ, ಪ್ರಾಮಾಣಿಕತೆ ಇಲ್ಲದಿದ್ದರೆ ಈ ದೇಶವನ್ನು ದೇವರೇ ಕಾಪಾಡಬೇಕು ! ಹೀಗಾದರೆ ಈ ಭ್ರಷ್ಟಾಚಾ ರಕ್ಕೆ ಕೊನೆಯೇ ಇರುವುದಿಲ್ಲ. ಇದು ಒಂದು ಸಂಪ್ರದಾಯವಾಗುತ್ತದೆ. ಅಧಿಕಾರದಲ್ಲಿರುವವನು ತನ್ನ ಅಧಿಕಾರಾವಧಿಯಲ್ಲಿ ತನ್ನವರಿಗೆ ತನ್ನನ್ನು ನಂಬಿದವರಿಗೆ ಏನಾದರೂ ಅನುಕೂಲ ಮಾಡೇ ಹೋಗಬೇಕು ಎಂದು ಅನೇಕರು ಮನಸ್ಸು ಮಾಡಿರುತ್ತಾರೆ. ಅದೇ ಶಾಸ್ತ್ರಿಗಳು ಹಾಗಲ್ಲ, ಅವರು ಬಹಳ ದೊಡ್ಡ ಮನುಷ್ಯರಾಗಿದ್ದರು, ತಮಗೆ ಬೇಕಾದವರಿಗೆ ಏನು ಸಹಾಯವನ್ನು ಕೂಡ ಮಾಡಲಿಲ್ಲ ಅದೇ ಈಗ ಅಧಿಕಾರದಲ್ಲಿರುವವರು ತಮ್ಮ ಜನರಿಗೆ ಉದ್ಯೋಗ ಕೊಡಬೇಕು, ವಿದ್ಯಾರ್ಥಿವೇತನ ಕೊಡಬೇಕು, ತಮ್ಮವರಿಗೆ ದೊಡ್ಡ ಹುದ್ದೆ ದೊರೆಯುವಂತೆ ಮಾಡಬೇಕು, ಸೈಟುಗಳನ್ನು ಹಂಚುವಾಗ ತಮ್ಮವರಿಗೆ ಮೊದಲು ಕೊಟ್ಟು ಉಳಿದವರಿಗೆ ನಂತರ ಕೊಡಬೇಕು ಎಂಬುದಾಗಿ ಇಂಥ ಎಲ್ಲಾ ಸಂಪ್ರದಾಯಗಳನ್ನೂ, ರೀತಿ ನೀತಿಗಳನ್ನೂ ಅನುಸರಿಸುತ್ತಾ ಅವನ್ನು ಆಚರಣೆಯಲ್ಲಿಟ್ಟು ಕೊಂಡಿದ್ದಾರೆ. ಇದನ್ನು ಎಲ್ಲರೂ ಬಹಳ ಗಹನವಾಗಿ ವಿಚಾರಮಾಡಬೇಕು. ಇವತ್ತು ದೇಶದಲ್ಲಿ ಆಪಾದನೆಗಳ ಸುರಿಮಳೆ ಅಧಿಕಾರದಲ್ಲಿರುವವರ ಮೇಲೆ ಬರುತ್ತಿದೆ. ಅವುಗಳಿಗೆ ಸಮಂಜಸವಾದ ರೀತಿಯಲ್ಲಿ ಉತ್ತರ ಕೊಡುವ ಶಕ್ತಿಯನ್ನು ಪಡೆಯಬೇಕು. ಈಗ ಕೇಶವಮೂರ್ತಿಯವರು ತಂದಿರುವ ನಿರ್ಣಯ ಸೂಕ್ತವಾಗಿದೆ, ಯಾರನ್ನೂ ಅಪಾದನೆ ಮಾಡುತ್ತಿಲ್ಲ. ಒಂದು ವಿಚಾರಣಾ ಆಯೋಗವನ್ನು ರಚನೆ ಮಾಡೋಣ. ಅದು ಈ 18 ವರ್ಷದಲ್ಲಿ ಯಾರೇ ಆಗಲಿ ಅಧಿಕಾರದ ಪೀಠಗಳನ್ನು ಯಾರು ಅಲಂಕರಿಸಿದ್ದಾರೋ ಅವರು ಶಾಸಕರಾಗಿರಬಹುದು, ಮಂತ್ರಿಗಳಾಗಿರಬಹುದು ಅಥವಾ ಇನ್ನಾವುದೇ ಒಂದು ಕಾರ್ಪೊರೇಷನ್‌ನ, ಮಂಡಲಿಯ ಅಧ್ಯಕ್ಷ ರಾಗಿರಬಹುದು ಅಂತಹ ಸಾರ್ವಜನಿಕ ಹಣ ಮತ್ತು ಅಧಿಕಾರವನ್ನು ಬಳಸತಕ್ಕ ಅಧಿಕಾರವನ್ನು ಹೊಂದಿರುವ ಜವಾಬ್ದಾರಿ ಇದ್ದರೆ ಅವರ ಬಗ್ಗೆ ಕ್ರಮವಾಗಿ ವಿಚಾರಣೆ ನಡೆಸಿ ಮೊದಲು ಅವರ ಆಸ್ತಿಪಾಸ್ತಿಗಳು ಎಷ್ಟಿವೆ, ಯಾರ್ಯಾರ ಹೆಸರಿನಲ್ಲಿ ಇವೆ, ಬಂಧು ಬಳಗದವರ ಯಾರ್ಯಾರ ಹೆಸರಿನಲ್ಲಿ ಇವೆ ಎಂಬುದು ಬೆಳಕಿಗೆ ಬಂದು ಯಾರಾದರೂ ಭ್ರಷ್ಟಾಚಾರ ಮಾಡಿದ್ದ ಪಕ್ಷದಲ್ಲಿ, ತನ್ನ ಅಧಿಕಾರ ಉಪಯೋಗಿಸಿ ಸಾರ್ವಜನಿಕರ ಹಣವನ್ನು ದುರುಪಯೋಗಿಸಿಕೊಂಡಿದ್ದ ಪಕ್ಷದಲ್ಲಿ ಅಂಥವರಿಗೆ ಶಾಸ್ತಿಯಾಗಲಿ, ಶಿಕ್ಷೆಯಾಗಲಿ. ಆದರಿಂದ ತಪ್ಪುಮಾಡದೇ ಇರತಕ್ಕವನಿಗಾದರೂ ಒಂದು ಒಳ್ಳೆಯ ಮಾತು ಬಂದೀತು, ಪ್ರಜಾಪ್ರಭುತ್ವದ ನೆಲೆಗಟ್ಟು ಭದ್ರವಾದೀತು. ಸಾರ್ವಜನಿಕ ಜೀವನ ದಲ್ಲಿ ಇವತ್ತು ಉಂಟಾಗಿರುವ ಕೊಳೆ ಅದರಿಂದ ತೊಳೆದು ಹೋದೀತು ಎಂದು ನಾನು ಆಶಿಸುತ್ತೇನೆ. ಈ ನಿರ್ಣಯವನ್ನು ಅಂಗೀಕಾರ ಮಾಡತಕ್ಕ, ಸ್ವಾಗತಿಸತಕ್ಕ ಔದಾರ್ಯ, ಪ್ರಾಮುಖ್ಯತೆ ಹಾಗೂ ರಾಷ್ಟ್ರವನ್ನು ಅಧಿಕಾರ ವರ್ಗದವರು ತೋರಿಸುತ್ತಾರೆ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ಅಧ್ಯಕ್ಷರೇ, ಸಭೆಯ ಮುಂದೆ ಇರುವ ನಿರ್ಣಯದ ವಿಷಯದಲ್ಲಿ ನನ್ನ ಕೆಲವು ವಿಚಾರಗಳನ್ನು ತಮ್ಮ ಮುಂದೆ ತರಲಿಕ್ಕೆ ಅಪೇಕ್ಷೆಪಡುತ್ತೇನೆ. ಈ ನಿರ್ಣಯದಲ್ಲಿ ಜವಾಬ್ದಾರಿ ಸ್ಥಾನದಲ್ಲಿರತಕ್ಕ ಜನರ ಆಸ್ತಿಪಾಸ್ತಿಗಳು 1947ನೇ ಇಸವಿ ಆಗಸ್ಟ್ 15ರ ನಂತರ ಎಷ್ಟಿದೆ, 47 ಆಗಸ್ಟ್ 15ಕ್ಕೆ ಎಷ್ಟಿತ್ತು ಎಂಬುದನ್ನು ತೀರ್ಮಾನ ಮಾಡಲಿಕ್ಕೆ ಒಂದು ಸಮಿತಿ ನೇಮಿಸಬೇಕು, ಒಂದು ಆಯೋಗ ನೇಮಿಸಬೇಕೆಂದು ಹೇಳಿದ್ದಾರೆ. ಆಯೋಗ ನಿಯಮಿಸಬೇಕೇ, ನಿಯಮಿಸಬಾರದೇ, ಸಮಿತಿ ನಿಯಮಿಸಬೇಕೇ, ನಿಯಮಿಸಬಾರದೇ, ಅದರ ಇಷ್ಟ, ಅನಿಷ್ಟ ಏನು ಎಂಬುದನ್ನು ಸ್ವಲ್ಪ ಆಲೋಚನೆಮಾಡ ಬೇಕಾದ್ದೇ. ಆದರೆ ತಾತ್ವಿಕವಾಗಿ ಹೇಳುದಾದರೆ, ಈಗ ಎರಡು ಮೂರು ವರ್ಷಗಳ ಲಾಗಾಯ್ತು ಕೇಂದ್ರ ಗೃಹ ಮಂತ್ರಿಗಳಿಂದ ಚಾಲಿತವಾದ ಭ್ರಷ್ಟಾಚಾರ ನಿರ್ಮೂಲನ ಆಂದೋಳ ನದ ದೆಸೆಯಿಂದ ಅದರ ಶೆಖೆ ರಾಷ್ಟ್ರದಲ್ಲಿ ಸಾಕಷ್ಟು ತಾಕಿದೆ, ಅದರ ಬಗ್ಗೆ ಬಹಳ ಪರಿಣಾಮ

ವಾಗಿದೆ. ಕೆಲವುಟ್ಟಿಗೆ ಈ ಆಂಧೋಳನ ದುರುಪಯೋಗವೂ ಆಗಿದೆ. ದುರುಪಯೋಗ ಎಂದರೆ ಅದು ಒಂದು ಫ್ಯಾಷನ್—'ಇದು ಭ್ರಷ್ಟಾಚಾರ ಯೋಜನೆ' ಅನ್ನುವಂತಹ ಆರೋಪ ಹೊರಿಸುವುದು ಅನೇಕ ಕಡೆ ಒಂದು ಫ್ಯಾಷನ್ ಆಗಿದೆ. ಅಂತಹ ಫ್ಯಾಷನ್ ಇಂದ ಈ ಭ್ರಷ್ಟಾಚಾರ ನಿರ್ಮೂಲನ ಆಂಧೋಳನಕ್ಕೆ ಒಂದು ಬಗೆಯಿಂದ ತೊಂದರೆಯಾಗಿದೆ ಅಂತಲೂ ಹೇಳಬಹುದು. ಇದು ಎಕ್ಸಾಜಿರೇಷನ್ ಅಂದರೆ ಅತಿರಂಜಿತವಾಗದಂತಹ ರೂಪದಲ್ಲಿ ಇದ್ದದು, ಇದ್ದಷ್ಟು ನ್ಯಾಯ ಸಮ್ಮತವಾದ ರೀತಿಯಲ್ಲಿ ಆಂಧೋಳನ ನಡೆಸಿದರೆ ನಿಶ್ಚಯವಾಗಿಯೂ ಒಂದು ಒಳ್ಳೆಯ ಪರಿಣಾಮವಾಗುತ್ತದೆ. ಕೇಂದ್ರ ಗೃಹ ಮಂತ್ರಿಗಳು ಕೆಲವೊಂದು, ಕ್ರಮ ಕೈಕೊಂಡರು, ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ವಿಜಲೆನ್ಸ್ ಕಮಿಷನ್‌ಗಳನ್ನು ನೇಮಕ ಮಾಡಿದರು. ಎಲ್ಲರಿಗೂ ಗೊತ್ತಿದ್ದಂತೆ ಈ ವಿಜಲೆನ್ಸ್ ಕಮಿಷನ್ ಅನ್ನುವುದು ಕೇವಲ ಅಧಿಕಾರಿಗಳ ವಿರುದ್ಧ ಮಾತ್ರ ಇದೆಯೇ ಹೊರತು ಅಧಿಕಾರೇತರರಲ್ಲಿ ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕೆ ಯಾವ ಕಾರ್ಯಕ್ರಮವನ್ನೂ ಕೈಕೊಳ್ಳಲಿಕ್ಕೆ ಆಗುವುದಿಲ್ಲ. ನಮ್ಮ ದೇಶದಲ್ಲಿ ಕೆಲವು ಸ್ನೇಹಿತರು ಹೇಳಿದರು ಬಡತನ, ದಾರಿದ್ರ್ಯ ಇದೆ, ಅದಕ್ಕೇ ಭ್ರಷ್ಟಾಚಾರ ಬೆಳೆಯುತ್ತಾ ಇದೆ ಎಂದು. ಅದನ್ನು ನಾವು ಒಂದು ರೀತಿಯಿಂದ ಒಪ್ಪಬಹುದು ದೇಶದ ದಾರಿದ್ರ್ಯ ದೇಶದ ಅಜ್ಞಾನ ಭ್ರಷ್ಟಾಚಾರಕ್ಕೆ ಕಾರಣ ಎನ್ನುವುದನ್ನು ಒಪ್ಪಬಹುದು. ಆದರೆ ಇಂದು ಭ್ರಷ್ಟಾಚಾರದ ಬಗ್ಗೆ ಜನತೆಗೆ ತಲೆಶೂಲೆ ಎದ್ದಿರುವುದು ಬಡವರ ಅಡ್ಡಮಾರ್ಗದ ಸಲುವಾಗಿ ಅಲ್ಲ. ಯಾರು ಬಲಿಷ್ಠರೋ : ಯಾರು ಯಾವುದೇ ಒಂದು ಸ್ಥಾನಮಾನವನ್ನು ಹೊಂದಿದ್ದಾರೋ, ಅಂತಹವರಿಂದ ಅಂತಹ ಅಧಿಕಾರೇತರ ಜನರ ಸಲುವಾಗಿ ತಲೆಶೂಲೆ ಎದ್ದಿರುವುದು, ಇದು ನಿಶ್ಚಯವಾಗಿ ನಿಲ್ಲಬೇಕು. ಶ್ರೀಮಾನ್ ಕೇಶವಮೂರ್ತಿಯವರು ಸೂಚಿಸಿದ ಸೂಚನೆ, ಹಿಂದೊಮ್ಮೆ ಇದೇ ನಿರ್ಣಯ, ಶಾಸನ ಸಭೆಯ ಮುಂದೆ ಬಂದು ವಿರೋಧ ಪಕ್ಷದ ಮಿತ್ರರು ಮಂಡಿಸಿದ್ದರು. ತತ್ಪೂರ್ವದಲ್ಲಿ ಇದೇ ನಿರ್ಣಯವನ್ನು ನಾನೂ ತಂದಿದ್ದೆ, ಆಗ ಕಾರಣಾಂತರದಿಂದ ಮಂಡಿಸಲಿಲ್ಲ. ಈಗ ಪುನಃ ವಿರೋಧ ಪಕ್ಷದವರು 30-40 ಜನ ತಂದು ಈ ನಿರ್ಣಯದ ಬಗ್ಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದಾರೆ. ಹಿಂದೆ ಆಗಲೇ ನಾನು ಹೇಳಿದ್ದೆ. 1947 ನೇ ಆಗಸ್ಟ್ 15ಕ್ಕೆ ಯಾವ ಸಾರ್ವಜನಿಕ ಜೀವನದಲ್ಲಿ ಇದ್ದಂತಹ ವ್ಯಕ್ತಿ ಎಷ್ಟು ಆಸ್ತಿಯನ್ನು ಆಗ್ಗೆ ಹೊಂದಿದ್ದ, ಅವನ ಹೆಂಡತಿ, ಮಕ್ಕಳ ಆಸ್ತಿ ಎಷ್ಟೆಷ್ಟಿತ್ತು, ಇವತ್ತಿನ ಆಸ್ತಿ ಎಷ್ಟಿದೆ, ಹೆಚ್ಚು ಆಸ್ತಿ ಬಂದಿದ್ದರೆ, ಅವನು ಏನಾದರೂ ವ್ಯವಹಾರ ಮಾಡಿ ಗಳಿಸಿದನೇ, ಉದ್ಯೋಗಮಾಡಿ ಗಳಿಸಿದನೇ ಯಾವ ರೀತಿ ಗಳಿಸಿದ ಎಂಬುದನ್ನು ಪರೀಕ್ಷೆಮಾಡಿ ತನಿಖೆ ಮಾಡಿದರೆ ಈ ಭ್ರಷ್ಟಾಚಾರ ನಿರ್ಮೂಲನಕ್ಕೆ ಅದು ಒಂದು ತಡೆಯಾಗುತ್ತದೆ ಎಂಬ ಮಾತನ್ನು ಅಂದು ಹೇಳಿದ್ದೆ. ಇದನ್ನು ಯಾವರೀತಿ ವಿಚಾರ ಮಾಡಬೇಕು ? ಇದಕ್ಕೆ ಅನೇಕ ಕಾನೂನುಗಳು, ಕ್ರಮ ಮುಂತಾದುವುಗಳು ಉಂಟು, ಈ ರೀತಿಯೊಳಗೆ ವಿಚಾರ ಮಾಡುವುದು ಅವಶ್ಯಕ. ಸಮಿತಿ ನೇಮಿಸಬೇಕೆ ಅಥವಾ ಮತ್ತೊಂದು ಯಾವುದಾದರೂ ರೀತಿಯಲ್ಲಿ ಮಾಡಬೇಕೇ ಎನ್ನುವ ವಿಷಯದಲ್ಲಿ ನಾನು ಕೆಲವು ಸೂಚನೆಗಳನ್ನು ಮಾಡಿದ್ದೆ. ಸಾಮಾನ್ಯವಾಗಿ ಇವತ್ತು ಪ್ರಜಾಪ್ರಭುತ್ವ ಇದೆ. ಪ್ರಜಾಪ್ರಭುತ್ವದಲ್ಲಿ ಅನೇಕ ಗುಣಗಳು ಇದ್ದರೂ ಕೆಲವು ಅದರೊಳಗಿನ ಗಂಡಾಂತರಗಳೂ ಉಂಟು. ಉದಾಹರಣಾರ್ಥವಾಗಿ ಪಕ್ಷವನ್ನು ನಾವು ಕಟ್ಟುತ್ತೇವೆ. ನಮ್ಮ ಪಕ್ಷದವರು ಬರಬೇಕೆಂದರೆ ಅಡ್ಡಮಾರ್ಗದಿಂದ ಬಂದರೂ ಅದನ್ನು ಮುಚ್ಚಿಕೊಳ್ಳುವುದು ಸಾಮಾನ್ಯವಾಗಿ ಇವತ್ತು ಮನುಷ್ಯನಲ್ಲಿ ಬೆಳೆದು ಬಂದಂಥ ಮಾರ್ಗವಾಗಿದೆ. ನಮ್ಮ ಪಾರ್ಟಿಯಲ್ಲಿ ಮಾತ್ರ ಅಲ್ಲ. ಸಾಮಾನ್ಯವಾಗಿ ಈ ಭ್ರಷ್ಟಾಚಾರ ಅನ್ನುವುದು ಕೇವಲ ಕಾಂಗ್ರೆಸ್ಸಿನವರಿಗೆ ಮೀಸಲಾಗಿದೆ ಎಂದು ತಿಳಿದಿದ್ದರೆ ಅದು ಬಹಳ ದೊಡ್ಡ ತಪ್ಪು. ಕಾಂಗ್ರೆಸ್‌ನವರಲ್ಲೂ ಉಂಟು, ಕಾಂಗ್ರೆಸ್ಸೇತರರಲ್ಲೂ ಇದೆ. ಇದು ಕಾಂಗ್ರೆಸ್, ಕಾಂಗ್ರೆಸ್ಸೇತರ ಸಲುವಾಗಿಯೇ ಅಲ್ಲ, ಇದು ಇಡೀ ರಾಷ್ಟ್ರದ ಪ್ರಶ್ನೆ. ಶ್ರೀಮಾನ್ ಕೇಶವ ಮೂರ್ತಿಗಳು ಅವರ ನಿರ್ಣಯದಲ್ಲಿ ಕಾಂಗ್ರೆಸ್ ಸದಸ್ಯರು ಮಾತ್ರ ವಿಚಾರ ಮಾಡಿರಿ ಎಂದು ಹೇಳಿಲ್ಲ. ಇದು ಕೇವಲ ಕಾಂಗ್ರೆಸ್ಸಿಗರಿಗೆ ಮಾತ್ರವಲ್ಲ ಎಲ್ಲರಲ್ಲೂ ಈ ತರಹದ ಸ್ವಭಾವ ಬೆಳಯಲಿಕ್ಕೆ ಹತ್ತಿದೆ ಎಂದು ಅವರು ತಿಳಿದು ಈ ರೀತಿ ನಿರ್ಣವನ್ನು ತಂದಿದ್ದಾರೆ ಎಂದು ತಿಳಿದುಕೊಳ್ಳೋಣ. ಇರಲಿ, ಇವತ್ತು ಈ ದೃಷ್ಟಿಯಿಂದ ವಿಚಾರ ಮಾಡಿನೋಡಿದರೆ ಒಂದು ಒಳ್ಳೆಯ ಸಂಪ್ರದಾಯ ಇದು, ಇದನ್ನು ಹೇಗೆ ಅನುಸರಿಸಬೇಕು ಎನ್ನುವುದನ್ನು ಮಾತ್ರ ಸರ್ಕಾರದವರು ವಿಚಾರ ಮಾಡಬೇಕಾಗುತ್ತದೆ. ಇನ್ನು ಕೆಲವು ದಿವಸದೊಳಗೆ ಚುನಾವಣೆಗಳು ಮುಂತಾದುವುಗಳು ಆಗುತ್ತದೆ. ಅದಕ್ಕೆ ಈ ವರ್ಷದಲ್ಲಿ ಯಾರಿಗೆ ಟಿಕೆಟ್ ಕೊಡಬೇಕು, ಏನು ಮಾಡಬೇಕು ಎನ್ನುವುದೆಲ್ಲಾ ಬರುತ್ತದೆ. ಆಗ್ಗೆ ಆದರೂ ಕನಿಷ್ಟಪಕ್ಷ ಯಾರು ಚುನಾವಣೆಗೆ ಅರ್ಜಿ ಕೊಡುತ್ತಾರೆ ಅಂತಹವರಿಗೆ 1947 ಆಗಸ್ಟ್ 15 ಕ್ಕೆ ಆಸ್ತಿ ಎಷ್ಟಿತ್ತು, ಇವತ್ತು ಎಷ್ಟಿದೆ ಎಂಬುದನ್ನು ತನಿಖೆ ಮಾಡಿದ್ದೇ ಆದರೆ ಅಷ್ಟುಮಟ್ಟಿಗಾದರೂ ಒಂದು ಚೆಕ್ ಆಗಿ ಒಂದು ಒಳ್ಳೆಯ ಪರಿಣಾಮವಾಗುತ್ತದೆ. ಆದರೆ ನಮ್ಮ ದುರ್‌ದೈವ ಏನಾಗಿದೆ ಎಂದರೆ, ಒಳ್ಳೆಯ ಜನರು ಎಲ್ಲಾ ಪಕ್ಷದಲ್ಲೂ ಉಂಟು, ಹಾಗೇ ಕೆಟ್ಟ ಜನರೂ ಉಂಟು, ಒಳ್ಳೆಯವರನ್ನು ಹೇಗೆ ಪ್ರತ್ಯೇಕ ಮಾಡ

(ಶ್ರೀ ಎ. ಜೆ. ದೊಡ್ಡಮೇಟಿ)

ಬೇಕೆನ್ನುವ ಕಾಲಕ್ಕೆ ಈ ಒಂದು ಅಂಶ ಹೊರಬೀಳುತ್ತದೆ, ಒಳ್ಳೆಯವರು ಎನ್ನುವುದರಲ್ಲಿ ಒಂದು ದೌರ್ಬಲ್ಯ ಇದೆ. ಅದೇನೆಂದರೆ. ಅವರು ಬಹಳ ಸುಲಭವಾಗಿ ಪ್ರತ್ಯೇಕವಾಗಿ ಬಿಡುತ್ತಾರೆ. ಇದನ್ನು ಹಿಂದೆಯೂ ಹೇಳಿದ್ದೆ, ಈಗಲೂ ಹೇಳುತ್ತಾ ಇದ್ದೇನೆ.

11-30 A.M.

ಆತ್ಮಸಾಕ್ಷಿಗೆ ಸರಿಯಾಗಿ ನಡೆದುಕೊಳ್ಳುವುದಕ್ಕೆ ಅಗದೇ ಇದ್ದರೂ ಕೂಡ ಒಬ್ಬ ಇಂತಹ ಮನುಷ್ಯ ಸಿಕ್ಕಿದರೆ ಅವನಿಗೆ ಕೆಲವು ನಮಸ್ಕಾರ ಮಹಾರಾಯ ಎಂದು ಹೇಳಿ ಅವನನ್ನು ದೂರದಲ್ಲಿ ಇಡಬೇಕು. ಅದಕ್ಕೆ ಕಾಯದೆ ಕಾನೂನು ಅವಶ್ಯಕತೆಯಿಲ್ಲ. ಇದನ್ನು ನಿಶ್ಚಿತವಾಗಿ ಕಟ್ಟು ನಿಟ್ಟಾಗಿ ಪಾಲಿಸಬೇಕು, ಪ್ರತಿಯೊಬ್ಬರೂ ಪಾಲಿಸಬೇಕು. ಪಿ. ಎಸ್. ಪಿ. ಯವರಾಗಲಿ, ಕಾಂಗ್ರೆಸ್‌ನವರಾಗಲಿ, ಸಂಯುಕ್ತ ಪಕ್ಷದವರಾಗಲಿ ಇದನ್ನು ಈ ರೀತಿ ಅನುಸರಿಸಿದರೆ ನೂರಕ್ಕೆ ಇಪ್ಪತ್ತೈದರಷ್ಟು ಜನಗಳ ಗುಣವನ್ನು ತಿದ್ದಲಿಕ್ಕೆ ಸಾಧ್ಯವಾಗುತ್ತದೆ. ಟಿಕೆಟ್ಟುಗಳನ್ನು ಕೊಡುವಾಗ ಈ ಪ್ರಶ್ನೆ ಕೇಳಬೇಕು. ಏನು 1947ನೇ ಇಸವಿ ಆಗಸ್ಟ್ 15ನೆಯ ತಾರೀಖು ಆಸ್ತಿ ಎಷ್ಟು ಇತ್ತು, ಇವೊತ್ತು ಎಷ್ಟು ಇದೆ, ಆಗಿನಿಂದ ಏನಾದರೂ ಅಧಿಕಾರಕ್ಕೆ ಬಂದಿದ್ದರೆ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಆಸ್ತಿಗಳಿಸಿಕೊಂಡಿದ್ದಾರೆಯೆ ಎಂದು ನೋಡಬೇಕು. ಹಿಂದಿನದು ಬೇಡ, 1947ನೆಯ ಆಗಸ್ಟ್‌ನಿಂದಲೇ ಅದಕ್ಕೆ ಸುಸಮಯ ಒದಗಿತ್ತು. ತತ್ಪೂರ್ವದಲ್ಲಿ, ಈ ಪ್ರಶ್ನೆ ಏಳುವುದಿಲ್ಲ. ಶ್ರೀಮಂತರೇ ಇರಲಿ, ಬಡವರೇ ಇರಲಿ 1947ನೆಯ ಆಗಸ್ಟ್ 15 ರಲ್ಲಿ ಅವರ ಆಸ್ತಿ ಪಾಸ್ತಿ ಏನು ಇತ್ತು ? ಇವೊತ್ತಿನ ದಿವಸ ಏನು ಇದೆ. ಇನ್ನಾವ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ಇವೊತ್ತಿನ ರಾಜಕಾರಣಿಗಳೆ ಆಗಿರಲಿ, ಶಾಸನ ಕರ್ತರಾಗಿರಲಿ, ಯಾವುದೇ ಮಂಡಳದ ಅಧ್ಯಕ್ಷರಾಗಿರಲಿ ಯಾವುದೇ ಸ್ಥಾನಮಾನಗಳು ಹೊಂದಿರಲಿ ಇವರ ನಿಧಿಯನ್ನು ವಿಚಾರ ಮಾಡಬೇಕು. ನಿಧಿಗಳನ್ನು ವಸೂಲು ಮಾಡುವುದಕ್ಕೆ ಹೊಗುತ್ತಾರೆ. ನಿಧಿಯನ್ನು ಕೊಡಲು ಮುಂದೆ ಬರುತ್ತಾರೆ. ಒಂದು ರೀತಿಯಿಂದ ಹಾಗೆ ಬಂದ ದುಡ್ಡನ್ನು ಅಲ್ಲಗೆಳೆಯುವಂತಿಲ್ಲ. ಇವೊತ್ತಿನಲ್ಲಿ ಏನು ಮಾಡುತ್ತಾರೆ ಎಂದರೆ, 25—30 ಲಕ್ಷರೂಪಾಯಿಗಳನ್ನು ಯಾವುದೋ ರೀತಿಯಿಂದ ಗಳಿಸಿರುತ್ತಾರೆ. ಅದರಲ್ಲಿ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳಿ ಎಂದು ಕೊಡುತ್ತಾರೆ. ಅದನ್ನು ವೃತ್ತ ಪತ್ರಿಕಾಕರ್ತರು ಬಹಳ ದಪ್ಪ ಅಕ್ಷರದಲ್ಲಿ ಅವರ ಪತ್ರಿಕೆಗಳಲ್ಲಿ ಅಚ್ಚು ಹಾಕುತ್ತಾರೆ. ಸರ್ಕಾರದವರು ಅಂತಹವರನ್ನು ಬಾಯಿತುಂಬಾ ಸಂತೋಷದಿಂದ ಹೊಗಳುತ್ತಾರೆ. ಆದರೆ ಇವೊತ್ತು ಪಾಪ ಒಬ್ಬ ಪ್ರಾಮಾಣಿಕ ಇರುತ್ತಾನೆ. ಅವನು ಮೈ ಬೆವರು ಸುರಿಸಿ ಕೆಲಸಮಾಡುತ್ತಾನೆ. ಸಾರ್ವಜನಿಕ ಸೇವೆ ಮಾಡುತ್ತಾನೆ. ಅವನು ಏನು ಆಸ್ತಿ ಸಂಪಾದಿಸಿ ನಿಧಿ ಕೊಡುವುದಕ್ಕೂ ಸಾಧ್ಯವಾಗುವುದಿಲ್ಲ. ಆದುದರಿಂದ ಇವೊತ್ತು ಈ ನಿಧಿ ಸಂಗ್ರಹಣಿಯಲ್ಲಿ ಅನುಸರಿಸತಕ್ಕಂಥ ಮಾರ್ಗದಲ್ಲಿ ಸಹಿತ ಒಂದು ರೀತಿ ಲೋಪದೋಷವಿದೆಯೆಂದು ಕಾಣಿಸುತ್ತದೆ. ಉದಾಹರಣಾರ್ಥಕವಾಗಿ ಹೇಳುವುದಾದರೆ, ಇಂಥ ಹಣಕ್ಕೆ ಕೇಂದ್ರ ಸರ್ಕಾರದವರು ಒಂದು ನಿಯಮಾವಳಿ ಮಾಡಿದರು. ಕಾರ್ಪೋರೇಟ್ ಬಾಡಿ, ಬ್ಯಾಂಕು ಮೊದಲಾದವುಗಳು ರಾಜಕೀಯ ಪಕ್ಷಕ್ಕೆ ಹಣ ಕೊಡಬೇಕೆಂದು ತೀರ್ಮಾನ ಮಾಡಿದರು. ಈ ತೀರ್ಮಾನ ಮಾಡಿದರ ವಿರುದ್ಧ ಅನೇಕರು ಪ್ರಭಟಿಸಿದರು. ಕಾರಣ, ಬಂಡವಾಳಶಾಹಿ ಜನರು ದೊಡ್ಡದೊಡ್ಡಜಮೀನ್ದಾರರು, ಶ್ರೀಮಂತರು ಹಣಕೊಟ್ಟು ತಮ್ಮ ಪ್ರತಿನಿಧಿಗಳ ಮೂಲಕ ಸರ್ಕಾರದ ಮೇಲೆ ವರ್ಚಸ್ಸನ್ನು ಬೀಸಲಿಕ್ಕೆ ಸಾಧ್ಯವಾಗುತ್ತದೆ ಎಂದು ಕಾಣುತ್ತದೆ. ಹೀಗಾದರೆ ಇಂತಹ ಸಂದರ್ಭಗಳನ್ನು ಸಹಿತ ವಿಚಾರ ಮಾಡಬೇಕು. ಆದುದರಿಂದ ಈ ನಿಧಿ ಕೂಡಿಸುವ ಕ್ರಮವನ್ನು ಪರ್ಯಾಲೋಚಿಸಬೇಕಾಗಿದೆ. ದೊಡ್ಡ ಶ್ರೀಮಂತರ ಕಡೆಯಿಂದ ಹಣ ಬಂದರೆ ಅದನ್ನು ಸೆಳೆಯಬಾರದೆಂದು ಅಲ್ಲ, ಅದರೆ ಭ್ರಷ್ಟಾಚಾರದ ದುಡ್ಡನ್ನು ಉಪಯೋಗ ಮಾಡಿದರೆ ಅದನ್ನು ತಪ್ಪಿಸಲಿಕ್ಕೆ ಮಾರ್ಗಗಳು ಇದೆ. ಅದಕ್ಕೆ ಅನೇಕ ಬಗೆಯ ಕಾನೂನುಗಳ ಬೆಂಬಲ ಇದೆ. ಅಂತಹ ದುಡ್ಡನ್ನು ವಸೂಲು ಮಾಡಿ ಸರ್ಕಾರದ ಬೊಕ್ಕಸಕ್ಕೆ ಸೇರಿಸಿ ಅದನ್ನು ಸಾರ್ವಜನಿಕ ಸಂಸ್ಥೆಗಳು ಉಪಯೋಗಿಸಿಕೊಳ್ಳಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿದಿಗಳು ಎಂದರೆ ಯಾವುದು ? ರಾಷ್ಟ್ರೀಯ ರಕ್ಷಣಾನಿಧಿಗಳೇ ಷಷ್ಟ್ಯಬ್ದಿಪೂರ್ತಿ ನಿಧಿಗಳೇ, ಯಾವುದು, ಯಾವ ಬ್ಲಾಕ್ ಮಾರ್ಕೆಟ್ ದುಡ್ಡು ಬೇಡ ಎಂದು ಹೇಳುತ್ತೀರಾ ? ಯಾವುದಕ್ಕೆ ಆದು ಬೇಕು ಎಂದು ಹೇಳುತ್ತೀರಾ ?

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಹೇಳಿದ್ದೇನೆ. ಯಾವ ನಿಧಿಯೇ ಇರಲಿ, ಈ ನಿಧಿಯನ್ನು ಒಂದು ಆದಾಯ ದೃಷ್ಟಿಯಿಂದ ಕೈ ಒಡ್ಡಿ ತೆಗೆದುಕೊಳ್ಳುತ್ತಾರೆ. ಅಂತಹ ಕಳ್ಳ ಹಣವನ್ನು ತೆಗೆದುಕೊಳ್ಳಬಾರದೆಂದು ನಾನು ನಿಶ್ಚಿತವಾಗಿ ಹೇಳುತ್ತೇನೆ. ಇವೊತ್ತು ಅವರಿಂದ ದುಡ್ಡು ಬೇಡುವ

ಬದಲು ಅವುಗಳನ್ನು ವಸೂಲು ಮಾಡಲು ಸಾಧ್ಯವಿದೆ. ಈವೊತ್ತು ದೇಶದಲ್ಲಿ ಜಗತ್ತಿನಲ್ಲಿ ಅನೇಕ ಬಗೆಯಾದಂಥ ಕ್ರಮಗಳು ಇವೆ. ಈ ಭ್ರಷ್ಟಾಚಾರದ ವಿವಿಧ ರೂಪಗಳು ಬಹುಶಃ ಎಲ್ಲಾ ಸಾರ್ವಜನಿಕ ಸಂಸ್ಥೆಗಳೂ ಮನೆ ಮಾಡಿವೆ. ಬರೀ ಕೋಆಪರೇಟೀವ್ ಸಂಸ್ಥೆಗಳಲ್ಲಿ ಅಲ್ಲ, ಸ್ಥಾನಿಕ ಸಂಸ್ಥೆಗಳೇ ಅಲ್ಲ ಅಥವಾ ಶಾಸನಕರ್ತರೇ ಅಲ್ಲ, ಎಲ್ಲ ಕಡೆಯೂ ಒಂದು ರೀತಿಯಲ್ಲಿ ಅಲ್ಲ ಇನ್ನೊಂದು ರೀತಿಯಲ್ಲಿ ಮನೆ ಮಾಡಿಕೊಂಡಿವೆ. ಸರ್ಕಾರದವರು ಅವುಗಳನ್ನು ನಿರ್ಮೂಲಗೊಳಿಸಲು ಅನೇಕ ಪ್ರಯತ್ನಗಳನ್ನು ಮಾಡಿದ್ದಾರೆ. ಮಾಡಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದ ಮಾನ್ಯ ಗೃಹ ಮಂತ್ರಿಗಳು ಈ ಬಗ್ಗೆ ಒಂದು ಭೀಷ್ಮ ಪ್ರತಿಜ್ಞೆ ಮಾಡಿದ್ದಾರೆ. ಭೀಷ್ಮ ಪ್ರಯತ್ನವನ್ನೂ ಮಾಡಿದ್ದಾರೆ. ಆದರೆ ಅವರ ಕೈಯಿಂದ ಅದು ನುಸುಳಿಕೊಂಡು ಹೋಗಿದೆ. ಅವರ ನ್ಯಾಯ ಮಾರ್ಗವನ್ನೂ ಪ್ರಾಮಾಣಿಕ ಪ್ರಯತ್ನವನ್ನೂ ಯಾರೂ ಅಲ್ಲಗೆಳೆಯುವುದಕ್ಕಾಗುವುದಿಲ್ಲ. ದುರ್ದೈವ ಎಂದು ಹೇಳಬೇಕಾಗಿದೆ. ಅಂತ ಗೃಹ ಮಂತ್ರಿಗಳ ಕರ್ತವ್ಯಕ್ಕೆ ಎಷ್ಟು ಮಂದಿ ಅಧಿಕಾರ ಹೊಂದಿರುವವರು, ಎಷ್ಟು ಮಂದಿ ಶಾಸನಕರ್ತರಾಗಿ ಚುನಾವಣೆಗಳಲ್ಲಿ ಆರಿಸಿದಂಥ ಮನುಷ್ಯರು ಬೆಂಬಲ ಕೊಡಿಸಿ ಏನು ಪ್ರಯೋಜನ ಮಾಡಿದ್ದಾರೆ? ದಿನಂಪ್ರತಿ ಅವರ ಕೈಯನ್ನು ಶಿಥಿಲ ಗೊಳಿಸುವುದಕ್ಕೆ, ದುರ್ಬಲಗೊಳಿಸುವುದಕ್ಕೆ ಅನೇಕರು ಪ್ರಯತ್ನ ಮಾಡುತ್ತಾರೆ. ಬಹುಶಃ ಇದು ಎಲ್ಲರಿಗೂ ತಿಳಿದ ವಿಷಯ. ನಿಜವಾಗಿಯೂ ಅಂತಹ ಗೃಹ ಮಂತ್ರಿಗಳು ನಮ್ಮ ದೇಶಕ್ಕೆ ಅವಶ್ಯಕ. ಅಂತಹ ಗೃಹ ಮಂತ್ರಿಗಳು ಭಾರತಕ್ಕೆ ಮಾತ್ರ ಅಲ್ಲ, ಪ್ರತಿಯೊಂದು ರಾಜ್ಯಕ್ಕೂ ಅವಶ್ಯಕ. ಈ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ ನಾವು ಅವರಿಗೆ ಅನೇಕ ರೀತಿಯ ಬೆಂಬಲ ಕೊಡಬೇಕು. ಬೆಂಬಲ ಕೊಡುವುದು ಅವಶ್ಯ.

ಇನ್ನು ವಿಜಿಲೆನ್ಸ್ ಕಮೀಷನ್ ಇದೆ. ಇದರಿಂದ ಅಧಿಕಾರೇತರ ಭ್ರಷ್ಟಾಚಾರ ನಿರ್ಮೂಲ ಮಾಡುವುದಕ್ಕೆ ಸಾಧ್ಯವಿಲ್ಲ. ಅದರ ನಿಯಮಗಳ ಪ್ರಕಾರ ಇದಕ್ಕೆ ಆಸ್ಪದವಿಲ್ಲ. ಹೀಗೆ ಆಸ್ಪದ ಇಲ್ಲದಿರುವಾಗ ಅಧಿಕಾರೇತರ ಜನರು ಯಾರೂ ಇದರೊಳಗೆ ಅವರ ಸಾರ್ವಜನಿಕ ಜೀವನನ್ನು ಶುದ್ಧ ಗೊಳಿಸುವುದಕ್ಕೆ ಅವರಲ್ಲಿರುವ ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೆಂದು ಗಂಭೀರವಾಗಿ ಏನಾದರೂ ಆಲೋಚನೆ ಮಾಡಬೇಕು. ಈ ಬಗ್ಗೆ ಈ ಶಾಸನಸಭೆಗೆ ಒಂದು ಪ್ರಶ್ನೆಯನ್ನು ಈಗಾಗಲೇ ಕಳುಹಿಸಿದ್ದಾರೆ. ಅದಕ್ಕೆ ಏನು ಉತ್ತರ ಕೊಡುತ್ತಾರೆ, ಸರ್ಕಾರದವರು ಅದನ್ನು ಹೇಳಲಿ.

ಈವೊತ್ತು ನಿರ್ಣಯದ ಒಳಗೆ ರಾಜ್ಯದಲ್ಲಿರುವ ಮಂತ್ರಿಗಳು, ಮಾಜಿ ಮಂತ್ರಿಗಳು, ಶಾಸಕರುಗಳು ಮಾಜಿ ಶಾಸಕರುಗಳು, ಶಾಸನಬದ್ಧ ಮಂಡಲಿಗಳ ಅಧ್ಯಕ್ಷರುಗಳು, ಮಾಜಿ ಅಧ್ಯಕ್ಷರುಗಳು, ಸದಸ್ಯರುಗಳು, ಹಾಗು ಮಾಜಿ ಸದಸ್ಯರುಗಳು ಮತ್ತು ಕೈಗಾರಿಕೋದ್ಯಮಿಗಳು ಹಾಗೂ ವ್ಯಾಪಾರಿಗಳೂ ಸಹ ಹೊಂದಿರುವ ಚರ ಹಾಗೂ ಸ್ಥಿರ ಆಸ್ತಿಗಳನ್ನು ಗೊತ್ತುಮಾಡುವುದಕ್ಕೋಸ್ಕರ ಆಯೋಗವೊಂದನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ. ಈ ರೀತಿ ವ್ಯಾಪಾರಸ್ಥರು ಮುಂತಾದವರನ್ನು ಕೇಳುವುದು ಎಷ್ಟರಮಟ್ಟಿಗೆ ಸಾಧ್ಯ? ಕಾನೂನು ಪದ್ಧತಿ ಎಷ್ಟರಮಟ್ಟಿಗೆ ಸುಲಭ ಆದೀತು ಎಂದು ನಾವು ಯೋಚಿಸಬೇಕು. ಇದು ಬಹಳ ಕಠಿಣವಾದ ಸಂಗತಿ. ಇದನ್ನು ವಿಚಾರ ಮಾಡಬೇಕು, ನಿರ್ಣಯ ಸೂಚನೆ ಮಾಡಿರುವವರು. ಇನ್ನೊಂದು ದೃಷ್ಟಿಯಿಂದ ವಿಚಾರ ಮಾಡಿದರೆ ನಿಜವಾಗಿಯೂ ನಮ್ಮ ಅಂತ ರಂಗವನ್ನು ನೋಡಿಕೊಳ್ಳಬೇಕು. ಶುದ್ಧ ಮನಸ್ಸಿನಿಂದ ಆದರ್ಶಗಳನ್ನು ಸೂಚಿಸುತ್ತೇವೆ, ಅದರಲ್ಲಿ ಅನುಮಾನ ಇಲ್ಲ. ಆದರೆ ಶುದ್ಧ ಮನಸ್ಸಿನಿಂದ ನಾವು ಹೇಳಿದುದನ್ನು ನಡೆಸುತ್ತೇವೆಯೆ? ಅದು ಕಷ್ಟ. ತಿಳಿದೆಯೋ, ತಿಳಿಯದೆಯೋ ಒಂದು ಪರಿಸ್ಥಿತಿ ಒತ್ತಡಕ್ಕೆ ಸಿಕ್ಕಿ ಜನರು ಆದರ್ಶವನ್ನು ಪಾಲಿಸುವುದಿಲ್ಲ. ಅದಕ್ಕೆ ಅನೇಕ ಕಾರಣಗಳು ಇವೆ. ಈ ಮಾತನ್ನು ನಾನು ಹಿಂದೆ ಹೇಳಿದ್ದೇನೆ. ಈಗಲೂ ಸಹ ಅದನ್ನು ಹೇಳುತ್ತೇನೆ. ಅಧಿಕಾರಿಗಳಲ್ಲಿ ಇರತಕ್ಕ ಭ್ರಷ್ಟಾಚಾರ ಅದು ಒಬ್ಬರ ಸ್ವಾಮ್ಯವಲ್ಲ. ಅವಕ್ಕೆ ಇನ್ನೊಬ್ಬರ ಸಹಾಯ ಬೇಕಾಗುತ್ತದೆ. ಭ್ರಷ್ಟಾಚಾರದಲ್ಲಿ ಅಧಿಕಾರಿಗಳ ಜೊತೆಗೆ ಇನ್ನೊಬ್ಬರೂ ಅಡಕವಾಗಿರುತ್ತಾರೆ. ಅವರು ಯಾರು ಅಂದರೆ ಸಾಮಾನ್ಯ ಸ್ಥಾನ ಮಾನ ಪಡೆದಿರತಕ್ಕ ಮುಖಂಡರು ಪುಡಾರಿಗಳು ಇದರಲ್ಲಿ ಇರುತ್ತಾರೆ. ಪೊಲಿಟಿಕಲ್ ಕರಪ್ಷನ್ ಅಂದರೆ ರಾಜಕೀಯ ಭ್ರಷ್ಟಾಚಾರ ನಿರ್ನಾಮವಾಗದ ಹೊರತು ಅಧಿಕಾರಿಗಳಲ್ಲಿಯ ಭ್ರಷ್ಟಾಚಾರ ಹೋಗಲಿಕ್ಕೆ ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟವಾಗಿ ಮನಗಾಣಬೇಕು. ಭ್ರಷ್ಟಾಚಾರ ಎಂಬುದು ಒಂದು ವಾಹನ ಇದ್ದ ಹಾಗೆ ಇದೆ. ವಾಹನ ಇದ್ದರೆ ಅಧಿಕಾರಿಗಳಲ್ಲಿ ಭ್ರಷ್ಟಾಚಾರ ಬರುತ್ತದೆ. ವಾಹನ ಇಲ್ಲದಿದ್ದರೆ ಭ್ರಷ್ಟಾಚಾರ ಬರುವುದಿಲ್ಲ. ಮೊದಲು ಸಾರ್ವಜನಿಕ ಜೀವನದಿಂದ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬೇಕು. ಇತ್ತೀಚೆಗೆ ಅನೇಕ ಸದಸ್ಯರು ಮದ್ಯಪಾನ ನಿಷೇಧದ ಬಗ್ಗೆ ಆಂದೋಲನ ನಡೆಸಿದ್ದಾರೆ. ಇದನ್ನು ಅನೇಕರು ಸ್ವಾಗತಿಸುತ್ತಿದ್ದಾರೆ. ಈ ಜನರು ಭ್ರಷ್ಟಾಚಾರ ನಿರ್ಮೂಲನ ಕಡೆಗೆ ತಮ್ಮ ದೃಷ್ಟಿ ಹೊರಳಿಸಿದರೆ ದೇಶಕ್ಕೆ ದೊಡ್ಡ ಉಪಕಾರವಾಗುತ್ತದೆ. ಇದನ್ನು ಹೇಳಲು ನಾನು ಅಪೇಕ್ಷಿಸುತ್ತೇನೆ. ಹೆಂಡ ಕುಡಿಯುವುದಕ್ಕಿಂತ ಹೆಚ್ಚು

(ಶ್ರೀ ಎ. ಜೆ. ದೊಡ್ಡಮೇಟಿ)

ಕೆಟ್ಟದು ಭ್ರಷ್ಟಾಚಾರ ಇದೆ. ಪರಿಸ್ಥಿತಿ ಎಷ್ಟು ವಿಪರೀತವಾಗಿದೆ ಅಂದರೆ, ಇದರಿಂದ ದೇಶದಲ್ಲಿ ಕಮ್ಯುನಿಸ್ಟರಿಗೆ ಆ ರಾಜ ಕತೆಗೆ ಸ್ವಾಗತದೊರಕುತ್ತದೆ. ಆದುದರಿಂದ ಭ್ರಷ್ಟಾಚಾರದ ಕಡೆಗೆ ದುರ್ಲಕ್ಷ್ಯ ಮಾಡುವುದು ಅಲಕ್ಷ್ಯ ಮಾಡುವುದು ಕಣ್ಣು ಮುಚ್ಚುವುದು ಖಂಡಿತ ಸಲ್ಲದು. ಇದನ್ನು ಪ್ರತಿಯೊಬ್ಬರೂ ಇಂದು ಆಲೋಚನೆ ಮಾಡಬೇಕಾಗಿದೆ. ಇದನ್ನು ನಿರ್ಮೂಲನ ಮಾಡುವುದಕ್ಕೆ ನಾನು ಒಂದು ಕಾರ್ಯಕ್ರಮ ಹೇಳಿದ್ದೇನೆ. ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹೇಳಬಹುದು. ಅವುಗಳನ್ನು ಹೇಳುವುದಕ್ಕಿಂತ ಪಾಲಿಸುವುದು ಬಹಳ ಅಗತ್ಯವಾಗಿದೆ. ಲಾಲ ಬಹಾದ್ದೂರ ಶಾಸ್ತ್ರಿಯವರ ನಿಧನಕ್ಕಾಗಿ ಇಡೀ ಜಗತ್ತು ಮರುಗಿತು. ಎಲ್ಲ ಪಕ್ಷ ಪಂಗಡದವರು, ನಮ್ಮ ದೇಶದಲ್ಲಿ ಅಷ್ಟೇ ಅಲ್ಲ ಪ್ರಪಂಚದ ಎಲ್ಲ ದೇಶಗಳಲ್ಲಿ ಕೂಡ ಅವರ ಮರಣಕ್ಕಾಗಿ ಕಣ್ಣೀರು ಸುರಿಸಿದ್ದಾರೆ. ಎಲ್ಲರಿಗೂ ಇಷ್ಟು ದುಃಖವಾಗಲು ನಿಜವಾದ ಕಾರಣ ಏನು ? ತಾಷ್ಕೆಂಟಿನಲ್ಲಿ ಜಯ ಸಂಪಾದನೆ ಮಾಡಲು ಅವರ ಮೂರು ಗೇಣಿನ ದೇಹ ಕಾರಣವಲ್ಲ. ಆದರೆ ಅವರಲ್ಲಿದ್ದ ಆತ್ಮ ಶಕ್ತಿ ಇದಕ್ಕೆ ಕಾರಣ. ಅವರು ಹಣ ಸಂಪಾದನೆ ಮಾಡಲಿಲ್ಲ ಆದರೆ ಸಾಲ ಮಾಡಿ ಹೋಗಿದ್ದಾರೆ. ಸಾಲ ಮಾಡಿ ಕಾರ್ ತೆಗೆದುಕೊಂಡಿದ್ದರಿಂದ ಅವರು ಹೋಗುವಾಗ್ಗೆ ಹಿಂದೆ ಸಾಲ ಬಿಟ್ಟು ಹೋಗಿದ್ದಾರೆ. ವಾಸಕ್ಕೆ ಅವರು ಒಂದು ಮನೆ ಕೂಡ ಮಾಡಿಕೊಂಡಿಲ್ಲ. ಇದರಿಂದ ಅವರ ಆತ್ಮ ಶಕ್ತಿ ಬೆಳೆದಿದೆ. ಇಂಥ ಆತ್ಮ ಶಕ್ತಿ ಅಧಿಕಾರಿಗಳಲ್ಲಿ ಕೂಡ ಇರಬೇಕು. ಕೆಲವು ಅಧಿಕಾರಿಗಳು ಮಂತ್ರಿಗಳ ಮನೆಗೆ ಹೋಗಿ ಭೇಟಿಯಾಗಿ ಬಂದರೆ ಸಾಕು ಅಂಥವರು ಮನೆ ಕಟ್ಟುತ್ತಾರೆ. ಇಂದಿನ ಸಂದರ್ಭದಲ್ಲಿ ಒಬ್ಬರು ಒಂದು ಮನೆ ಕಟ್ಟಿದರೆ ಇನ್ನೊಬ್ಬರು ನಾಲ್ಕು ಮನೆ ಕಟ್ಟಿಸುತ್ತಾರೆ. ಒಬ್ಬರು ಒಂದು ಕಾರು ತೆಗೆದುಕೊಂಡರೆ ಇನ್ನೊಬ್ಬರು ನಾಲ್ಕು ಎಂಟು ಕಾರು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಭ್ರಷ್ಟಾಚಾರದಿಂದ ಹಣ ಸಂಪಾದಿಸಿರುವವರು ಒಬ್ಬರು ಒಂದು ಲಕ್ಷ ರೂಪಾಯಿ ದಾನ ಕೊಟ್ಟರೆ ಇನ್ನೊಬ್ಬರು ಮುಖ್ಯ ಮಂತ್ರಿಗಳ ರಾಷ್ಟ್ರೀಯ ನಿಧಿಗೆ 10 ಲಕ್ಷ ಕೊಡುವುದಕ್ಕೆ ಮುಂದೆ ಬರುತ್ತಾರೆ. ಅನೀತಿಯಿಂದ ಹಣ ಸಂಪಾದಿಸುವ ಇಂಥ ಪರಿಸ್ಥಿತಿಯನ್ನು ಬೆಳೆಯಗೊಟ್ಟರೆ ನಿಜವಾಗಿಯೂ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಲಾರದು. ಜನತೆಯಲ್ಲಿ ಪ್ರಾಮಾಣಿಕತೆ ಉಳಿಯುವುದಿಲ್ಲ. ಮುಖ್ಯವಾಗಿ ಎಲ್ಲ ರಾಜಕೀಯ ಪಕ್ಷಗಳ ಮುಖಂಡರಲ್ಲಿ ಜನತೆಯ ಸೇವೆ ಮಾಡುವ ಉನ್ನತ ಮಟ್ಟದ ಧ್ಯೇಯವಿರಬೇಕಾದುದು ಅತ್ಯಗತ್ಯ. ಪ್ರಾಮಾಣಿಕತೆಯಿಂದ ದೇಶದ ಸೇವೆ ಮಾಡುವುದಕ್ಕೆ ಆಸ್ಪದವಿರಬೇಕು. ಅನ್ಯಾಯ ಮಾರ್ಗ ಅನುಸರಿಸುವದಕ್ಕೆ ಆಸ್ಪದ ಕೊಡದೆ ಅಂಥಾದ್ದನ್ನು ಕೂಡಲೆ ಮಟ್ಟಹಾಕುವುದಕ್ಕೆ ಸೂಕ್ತ ಮಾರ್ಗ ಕಂಡು ಹಿಡಿಯಬೇಕು. ಇದು ರಾಜ್ಯಭಾರ ನಡೆಸುವ ಸರಕಾರದ ವಿಷಯ. ಇನ್ನೊಂದು ವರ್ಷಕ್ಕೆ ಸಾರ್ವತ್ರಿಕ ಚುನಾವಣೆ ಬರಲಿದೆ. ಪಕ್ಷದ ಪರವಾಗಿ ಚುನಾವಣೆಗೆ ನಿಲ್ಲುವುದಕ್ಕೆ ಟಿಕೆಟ್ ಕೊಡುವ ಪ್ರಶ್ನೆ ಬರುತ್ತದೆ. ಆದುದರಿಂದ ನಮ್ಮ ಮುಖ್ಯ ಮಂತ್ರಿಗಳಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಪಾರ್ಲಮೆಂಟರಿ ಬೋರ್ಡಿನವರು ಟಿಕೆಟ್ ಕೊಡುವಾಗ್ಗೆ ಸುದೀರ್ಘವಾಗಿ ಆಲೋಚನೆ ಮಾಡಬೇಕು. ಟಿಕೆಟ್ ಪಡೆಯುವವರು ಎಂಥವರು ಇದ್ದಾರೆಂದು ಪರಿಶೀಲನೆ ನಡೆಸಬೇಕು. ಟಿಕೆಟ್ ಕೊಡುವಾಗ್ಗೆ ಪಿ. ಎಸ್. ಪಿ. ಪಾರ್ಲಮೆಂಟರಿ ಬೋರ್ಡಿನವರು ಸಹ ಈ ಅಂಶವನ್ನು ಆಲೋಚನೆ ಮಾಡಬೇಕು ಎಂದು ಹೇಳುತ್ತೇನೆ. ಚುನಾವಣೆಗೆ ಟಿಕೆಟ್ ಪಡೆದವರೇ ರಾಜ್ಯಭಾರ ಮಾಡಲು ಬರುತ್ತಾರೆ. ಆದುದರಿಂದ ಪ್ರಾರಂಭದಲ್ಲಿ ಸೆಲೆಕ್ಷನ್ ಮಾಡುವಾಗ್ಗೆ ಆಲೋಚನೆ ಮಾಡಿದರೆ ಒಳ್ಳೆಯದಾಗುತ್ತದೆ. ಈ ರೀತಿ ಆಲೋಚನೆ ಮಾಡಿ ಟಿಕೆಟ್ ಕೊಟ್ಟರೆ ಒಳ್ಳೇ ಜನ ಮುಂದೆ ಬರುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರನ್ನೇ ಪಾರ್ಲಮೆಂಟರಿ ಬೋರ್ಡಿನ ಚೇರಮನ್ ಮಾಡಿರಿ.

ಶ್ರೀ ಅಂದಾನಪ್ಪ ದೊಡ್ಡಮೇಟಿ.—ಈ ಸಮಯದಲ್ಲಿ ನಾವು ಅನೇಕ ಕಾರ್ಯಗಳನ್ನು ಮಾಡಬೇಕಾಗಿದೆ. ನಾವು ಮೊದಲು ಆತ್ಮ ಶಕ್ತಿ ಪಡೆಯೋಣ. ಬರಿ ಸರಕಾರವನ್ನು ಟೀಕಿಸುವ ಗುರಿ ಇಟ್ಟುಕೊಳ್ಳಬಾರದು. ಆತ್ಮ ಶಕ್ತಿ ಬೆಳೆಸುವುದಕ್ಕೆ ಒಂದು ಸರಿಯಾದ ಮಾರ್ಗ ಕಂಡು ಹಿಡಿಯುವುದು ಅವಶ್ಯಕ. ಕೆಲವರು ದಪ್ಪ ಚರ್ಮದವರು ಆಗಿರುವುದರಿಂದ ಅಂಥವರಿಗೆ ಎಷ್ಟು ಹೇಳಿದರೂ ಪ್ರಯೋಜನವಾಗುವುದಿಲ್ಲ. ಕೆಲವರು ಒಳ್ಳೆಯವರು ಇದ್ದರೂ ಕೂಡ ಅಂಥವರನ್ನು ಬಯ್ಯುತ್ತಾರೆ. ಇದು ಸರಿಯಲ್ಲ. ಭ್ರಷ್ಟಾಚಾರ ಎಂದು ಆಂದೋಲನ ಮಾಡುವವರು ಮೊದಲು ತಮ್ಮ ತಮ್ಮ ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕು. ತನ್ನಲ್ಲಿ ಏನಾದರೂ ದೋಷ ಇದೆಯೇ ಎಂದು ಆತ್ಮ ಸಂಶೋಧನೆ ಮಾಡಿಕೊಂಡು ನೋಡಬೇಕು. ಭ್ರಷ್ಟಾಚಾರದ ವಿರುದ್ಧ ಮಾತನಾಡುವುದಕ್ಕೆ ಅಧಿಕಾರ ಇದೆಯೇ ನೋಡಬೇಕು. ಅಧಿಕಾರ ಇಲ್ಲದಿದ್ದರೆ ಹೇಳಲು ಹೋಗಬಾರದು. ಯಾಕಂದರೆ ಅಂಥವರು ಅಪಹಾಸ್ಯಕ್ಕೆ ಕಾರಣ ಆಗುತ್ತಾರೆ. ಸದಾಚಾರ ಒಳ್ಳೇ ನಡತೆ ಎಲ್ಲರೂ ಅಪೇಕ್ಷಿಸುತ್ತಾರೆ. ಇದನ್ನು ಪ್ರತಿಯೊಬ್ಬನೂ ತನ್ನಿಂದಲೇ ಪ್ರಾರಂಭಿಸಬೇಕು. 'ಚಾರಿಟಿ ಬಿಗಿನ್ಸ್ ಅಟ್ ಹೋಂ' ಎಂದು ಗಾದೆ

ಇದೆ. ಸದಾಚಾರ ಪರಿಪಾಲನೆ ಮಾಡತಕ್ಕವರು ಮೊದಲು ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕು. ಯಾವಾಗಲೂ ನಾನು ನನ್ನದು ನನ್ನ ಮಕ್ಕಳು ನನ್ನ ಸಂಸಾರ ಎಂದು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ದೇಶದ ಸೇವೆ ಮಾಡತಕ್ಕವರು ತಾವು ದೇಶದ ಟ್ರಸ್ಟೀ ಆಗಿದ್ದೇವೆ ಎಂಬ ಭಾವನೆ ಇರಬೇಕು. ಯಾರೇ ಇರಲಿ ಸ್ವಂತಕ್ಕಾಗಿ ಸಂಪಾದನೆ ಮಾಡುವವರು ಭ್ರಷ್ಟಾಚಾರದ ಬಗ್ಗೆ ಉಪದೇಶ ಮಾಡುವ ಯಾವ ಅಧಿಕಾರ ಪಡೆದಿರುವುದಿಲ್ಲ. ಯಾಕಂದರೆ ಅಂಥವರ ಮಾತಿಗೆ ಮನ್ನಣೆ ಸಿಕ್ಕುವುದಿಲ್ಲ. ಉಪದೇಶ ಮಾಡುವವರ ಆಚರಣೆ ಶುದ್ಧವಾಗಿರಬೇಕು. ಅಮೇರಿಕದಲ್ಲಿ ಹಾಗೆ ಇದೆ, ಇಂಗ್ಲೆಂಡಿನಲ್ಲಿ ಹೀಗೆ ಇದೆ, ಅದುದರಿಂದ ನಮ್ಮ ದೇಶದಲ್ಲಿ ಈ ರೀತಿ ಮಾಡಬೇಕು ಎಂದು ಕೆಲವು ಸ್ನೇಹಿತರು ಹೇಳುತ್ತಾರೆ. ಬೇರೆ ದೇಶದಲ್ಲಿ ಹಾಗೆ ಇರಬಹುದು. ಆದರೆ ನಮ್ಮ ದೇಶ ವೇದ ಕಾಲದಿಂದ ಪವಿತ್ರವಾದ ಶೀಲವಿದ್ದ ದೇಶ, ಉಪನಿಷತ್ ಕಾಲದಿಂದ ಅತ್ಯುತ್ತಮವಾದ ದೇಶವಾಗಿದೆ. ಭಾರತ ದೇಶವು ಜಗತ್ತಿಗೆ ಮಾರ್ಗದರ್ಶನ ಮಾಡಬಲ್ಲದು. ಅಂಥಾ ಒಂದು ಪರಂಪರೆ ನಮ್ಮ ದೇಶಕ್ಕೆ ಇದೆ. ಆತ್ಮ ಶಕ್ತಿಯ ಬಲಿಷ್ಠ ರಾಷ್ಟ್ರ ಕಟ್ಟಬೇಕಾಗಿದೆ. ಲಾಲ ಬಹಾದ್ದೂರ ಶಾಸ್ತ್ರಿಯವರು ತಾಷ್ಕೆಂಟಿನಲ್ಲಿ ಯಶಸ್ಸು ಸಂಪಾದನೆ ಮಾಡಲು ದುಡ್ಡಿನಿಂದ ಬಲ ಬರಲಿಲ್ಲ, ಅಣು ಬಾಂಬು ತೆಗೆದುಕೊಂಡು ಹೋಗಿರಲಿಲ್ಲ, ಆದರೆ ಪ್ರಚಂಡವಾದ ಆತ್ಮ ಶಕ್ತಿಯ ಬಲ ಇದ್ದಿತು. ಆದುದರಿಂದ ಪ್ರತಿಯೊಬ್ಬರೂ ಆತ್ಮ ಶಕ್ತಿ ಪಡೆಯುವುದಕ್ಕೆ ನಾವೆಲ್ಲರೂ ಬದ್ಧಕಂಕಣರಾಗೋಣ. ಒಂದು ಕಾಸನ್ನೂ ಅನ್ಯಾಯ ಮಾರ್ಗದಿಂದ ಸಂಪಾದನೆ ಮಾಡ ಕೂಡದು ನ್ಯಾಯವಾದ ಮಾರ್ಗದಿಂದ ಸಂಪಾದನೆ ಮಾಡಿದ್ದರೆ ಅದನ್ನು ಉಪಯೋಗಿಸುವುದಕ್ಕೆ ಒಪ್ಪಿಗೆ ಕೊಡೋಣ. ಈ ಮಾರ್ಗದಲ್ಲಿ ಮುನ್ನಡೆಯೋಣ. ಇಲ್ಲದಿದ್ದರೆ ಯಾವ ಪಕ್ಷದವರೇ ಇರಲಿ, ಯಾವ ಜಾತಿಯವರೇ ಇರಲಿ, ಯಾವ ಮತದವರೇ ಇರಲಿ, ಅನ್ಯಾಯ ಮಾರ್ಗದಿಂದ ಸಂಪಾದನೆ ಮಾಡಿದ್ದನ್ನು ಮಟ್ಟ ಹಾಕಲೇಬೇಕು. ಅದನ್ನು ನಿರ್ಣಯ ಮಾಡಲೇಬೇಕು. ಸಂದೇಹ ಇಲ್ಲದೇ

ಇರತಕ್ಕ ಜನ ಸಮೂಹ ನಿರ್ಮಾಣ ಮಾಡುವುದಕ್ಕೆ ಒಂದು ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಶ್ರೀಮಾನ್ ಕೇಶವ ಮೂರ್ತಿಯವರ ನಿರ್ಣಯವನ್ನು ಶೀಘ್ರದಲ್ಲಿ ಕಾರ್ಯಗತ ಮಾಡುವುದು ಒಳ್ಳೆಯದು. ಒಳ್ಳೇ ಮಾರ್ಗ ಅನುಸರಿಸಬೇಕು ಎಂದು ಆಶಿಸುತ್ತೇನೆ. ಶ್ರೀಮಾನ್ ಕೇಶವಮೂರ್ತಿಯವರು ಈ ನಿರ್ಣಯ ಒಂದು ಎಚ್ಚರಿಕೆ ಕೊಟ್ಟಿದೆ ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಅಪೇಕ್ಷೆ ಪಡುತ್ತೇನೆ.

†ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಉತ್ತರ ತಾಲ್ಲೂಕ್).—ಸ್ವಾಮಿ, ನಾನು ಶ್ರೀ ಎಚ್. ಆರ್. ಕೇಶವಮೂರ್ತಿಗಳು ತಂದಿರತಕ್ಕ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಸ್ವಾಮಿ, ನಮ್ಮ ದೇಶದಲ್ಲಿ ಇಂಥ ಒಂದು ನಿರ್ಣಯದ ಅಗತ್ಯ ಬಹಳವಾಗಿದೆ ಎಂಬ ತೀರ್ಮಾನಕ್ಕೆ ಈಗಾಗಲೇ ಒಂದಲ್ಲ ಒಂದು ರೀತಿಯಲ್ಲಿ ನಾವೆಲ್ಲರೂ ಬಂದಿದ್ದೇವೆ. ಈ ವಿಚಾರವನ್ನು ನಾವು ಪ್ರಸ್ತಾಪ ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲಂತೂ ಈ ಭ್ರಷ್ಟಾಚಾರ ದೇಶದಲ್ಲಿ ದಿನದಿನಕ್ಕೂ ಜಾಸ್ತಿಯಾಗುತ್ತಿದೆ. ಪ್ರತಿಯೊಬ್ಬರಲ್ಲೂ ಸ್ವಾರ್ಥ—ದುರಾಸೆಗಳು ಜಾಸ್ತಿಯಾಗುತ್ತಿದೆ ಎಂಬುದು ಸರ್ವರಿಗೂ ವಿದಿತವಾದುದಾಗಿದೆ. ಇದನ್ನು ಬೆಳೆಗೊಡಬಾರದು, ಇದನ್ನು ನಾಶಪಡಿಸಬೇಕೆಂದು ಬಾಯಲ್ಲಿ ನಾವೆಲ್ಲರೂ ಹೇಳುತ್ತಲೇ ಇದ್ದೇವೆ. ಆದರೆ ಅವನ್ನು ಕಾರ್ಯತಃ ಮಾಡುವಂಥ ನಿಷ್ಠಾವಂತ ಜನರು ದಿನದಿನಕ್ಕೂ ಕಡಮೆಯಾಗುತ್ತಿದ್ದಾರೆ ದೇಶದಲ್ಲಿ ಇಂಥ ವಿಚಾರಗಳೇ ಮುಂದುವರಿದಲ್ಲಿ ದೇಶದಲ್ಲಿ ಎಂಥ ಅನಾಹುತಗಳು ನಡೆಯಬಹುದು, ನಮ್ಮ ಪ್ರಜಾಪ್ರಭುತ್ವಕ್ಕೆ ಎಂಥ ದೊಡ್ಡ ಕೊಡಲಿಯ ಪೆಟ್ಟು ಬೀಳಬಹುದು ಎಂಬುದನ್ನು ನನಗೆ ಹಿಂದೆ ಮಾತನಾಡಿದ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಇದೇ ಮಾತುಗಳನ್ನು ಈ ಹಿಂದೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮತ್ತು ತದನಂತರ ಕೇಂದ್ರದಲ್ಲಿ ಮಂತ್ರಿಗಳಾದ ಶ್ರೀ ಸಂಜೀವಯ್ಯನವರೂ ಹೇಳಿದ್ದಾರೆ. ಅವರೊಂದಾವರ್ತಿ ಇಂಥ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡುತ್ತ ಕೇವಲ ಒಂದು ಜಟಕಾ ಗಾಡಿಯಲ್ಲಿ ಹೋಗುವುದಕ್ಕೂ ಸಹಾ ಯತ್ನವಿಲ್ಲದಿದ್ದಂಥ ಒಬ್ಬ ವ್ಯಕ್ತಿ ಈ ದಿವಸ ಕಾಂಗ್ರೆಸ್ಸಿಗೆ ಸೇರಿದ ನಂತರ ಹತ್ತಾರು ಲಕ್ಷ ರೂಪಾಯಿಗಳ ಆಸ್ತಿವಂತನಾಗಿದ್ದಾನೆ ಎಂದು ಅವರು ಹೇಳಿದ್ದಾರೆ. ಅನಂತರ ಹಾಲಿ ಕೇಂದ್ರದಲ್ಲಿ ಗೃಹ ಮಂತ್ರಿಗಳಾಗಿರತಕ್ಕ ಶ್ರೀ ನಂದಾರವರೂ ಕೂಡ ದೇಶದಲ್ಲಿ ಬೆಳೆಯುತ್ತಿರುವ ಭ್ರಷ್ಟಾಚಾರವನ್ನು ಹೇಗಾದರೂ ಮಾಡಿ ಮಟ್ಟಾ ಹಾಕಲೇ ಬೇಕೆಂದು ಬಹಳ ದಿನಗಳಿಂದಲೂ ಹೇಳುತ್ತಲೇ ಇದ್ದಾರೆ; ಅದರ ಬಗ್ಗೆ ಅವರು ಸಾಕಷ್ಟು ಶ್ರಮಿಸುತ್ತಲೂ ಇದ್ದಾರೆ, ಈ ವಿಚಾರ ಅನೇಕರಿಗೆ ಗೊತ್ತಿದೆ. ಈ ದಿವಸ ನಮ್ಮ ದೇಶದ ನಾಯಕರು ಅವರೇ ಆಗುತ್ತಾರೆಂದು ನಾವು ಅನೇಕರು ಭಾವಿಸಿದ್ದೆವು. ಆದರೆ ಕೆಲವರು ಅದನ್ನು ಆಗಗೊಡಲಿಲ್ಲ; ಅವರ ಹೆಸರನ್ನೂ ಸಹಾ ಒಬ್ಬರೂ ಆಗ ಅಲ್ಲಿ ಸೂಚಿಸಲಿಲ್ಲ. ಮಾತೆತ್ತಿದರೆ ನಮ್ಮಲ್ಲಿ ಅನೇಕರು ಬೀರಬಲ್ಲನ ಕಥೆಗಳನ್ನು ಇಲ್ಲಿ ಉದಹರಿಸುತ್ತಾರೇ ಆದರೆ ಅವರೇಕೆ ಆತನಂತೆ ನಡೆಯಬಾರದು ? ಆತನು ತಪ್ಪು ಮಾಡಿದವನು ಅವನು ಯಾರೆ,

(ಶ್ರೀ ಬಿ. ಕೆ. ಪುಟ್ಟಯ್ಯ)

ಆಗಿರಲಿ, ಒಂದು ವೇಳೆ ತನ್ನ ಮಗನೇ ಆಗಿದ್ದರೂ ಆತನನ್ನು ಗಲ್ಲಿಗೇರಿಸುವಂಥ ನ್ಯಾಯ ಧರ್ಮಗಳು ಅವನಲ್ಲಿದ್ದವು. ದೇಶದಲ್ಲಿ ನಾವೀದಿವಸ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳಂಥ ನಿಸ್ಪೃಹ ಜನರನ್ನು ಎಣಿಸಬಹುದು. ಈ ದಿವಸ ಸತ್ಯ, ಧರ್ಮ ಮತ್ತು ಅಹಿಂಸೆಗಳನ್ನು ದೇಶದಲ್ಲಿ ಮುಂದುವರಿಸಬೇಕೆಂಬ ಜನರು ಈ ನಿರ್ಣಯವನ್ನು ಒಪ್ಪಿಕೊಳ್ಳದೆ ಇದ್ದಪಕ್ಷದಲ್ಲಿ ದೇಶ ಬಹಳ ದುಸ್ಥಿತಿಗೆ ಬರುತ್ತದೆ. ನಮ್ಮ ರಾಜ್ಯದಲ್ಲಿ ದೊಡ್ಡ ಅಧಿಕಾರ ಸ್ಥಾನದಲ್ಲಿರತಕ್ಕ ದೊಡ್ಡ ವ್ಯಕ್ತಿಗಳು ಈ ದಿವಸ ಈ ದೇಶದಲ್ಲಿ ಒಂದು ಸಾವಿರದ ಇನ್ನೂರು ಕೋಟಿ ರೂಪಾಯಿಗಳ ಖೋಟಾ ನೋಟುಗಳು ಚಲಾವಣೆಯಲ್ಲಿವೆ ಎಂದು ಹೇಳಿದ್ದಾರೆ. ಅಂದಮೇಲೆ ನಮ್ಮ ರಾಜ್ಯದಲ್ಲಿ ದುರ್ವ್ಯವಹಾರಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಎಂಬುದನ್ನು ವರ್ಣಿಸಬೇಕಾಗಿಲ್ಲ. ಇಂಥ ದುರ್ವ್ಯವಹಾರಗಳ ಮೂಲವನ್ನು ಕಂಡುಹಿಡಿದು ಅದನ್ನು ನಿರ್ಮೂಲ ಮಾಡತಕ್ಕ ಶಕ್ತಿ ಸರ್ಕಾರಕ್ಕಿಲ್ಲವೇ ಎಂದು ನಾನು ಕೇಳಲಿಚ್ಛಿಸುತ್ತೇನೆ. ಹೀಗೆ ನಮ್ಮಲ್ಲಿ ಖೋಟಾ ನೋಟುಗಳ ಚಲಾವಣೆ ಇರುತ್ತೆಂಬ ವಿಷಯವನ್ನು ಶ್ರೀ ಟಿ. ಟಿ. ಕೆ. ಅವರೇ ಹೇಳಿದ್ದಾರೆ. ಹಾಗೆ ದೇಶದಲ್ಲಿ ದೊಡ್ಡ ಅಧಿಕಾರ ಸ್ಥಾನದಲ್ಲಿರತಕ್ಕ ಜನರೇ ಖೋಟಾ ನೋಟುಗಳ ಚಲಾವಣೆಯಿದೆ ಎಂದು ಹೇಳುವುದಾದರೆ ಅವರೂ ಕೂಡ ಆ ಭ್ರಷ್ಟಾಚಾರಕ್ಕೆ ಸಹಕಾರ ನೀಡುತ್ತಿದ್ದಾರೆಂದು ನಾವೇಕೆ ಹೇಳಬಾರದು? ಈ ದಿವಸ ನಮ್ಮ ಸ್ನೇಹಿತರಲ್ಲಿ ಕೆಲವರು 50-60 ಸಾವಿರ ರೂಪಾಯಿಗಳನ್ನು ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದರೂ ಅವರು ಸರ್ಕಾರಕ್ಕೆ ಯಾವ ಒಂದು ರೀತಿಯಲ್ಲೂ ಲೆಕ್ಕಗಳನ್ನೇ ಕೊಡುತ್ತಿಲ್ಲ. ಆದರೆ ಸಾಮಾನ್ಯ ಜನರ ವ್ಯವಹಾರದಲ್ಲಿ 3 ಸಾವಿರಕ್ಕೆ ಮೇಲ್ಪಟ್ಟು ವರಮಾನ ಬರತಕ್ಕವರೆಲ್ಲಾ ಸರ್ಕಾರಕ್ಕೆ ಇನ್‌ಕಂಟ್ಯಾಕ್ಸ್ ಲೆಕ್ಕಗಳನ್ನು ಕೊಡಬೇಕೆಂಬ ನೇಮದ ಪ್ರಕಾರ ಎಲ್ಲರೂ ಲೆಕ್ಕ ಕೊಡಲೇ ಬೇಕಾಗಿದೆ. ಆದರೆ ಆ ನಮ್ಮ ಸ್ನೇಹಿತರು ಕೆಲವರು ಯಾವ ಲೆಕ್ಕಗಳನ್ನೂ ಇಟ್ಟಿಲ್ಲ, ಸರ್ಕಾರಕ್ಕೂ ಲೆಕ್ಕಗಳನ್ನು ಕೊಡುತ್ತಿಲ್ಲ. ಸಾರ್ವಜನಿಕ ರಂಗದಲ್ಲಿ ಕೆಲಸ ಮಾಡತಕ್ಕ ಜನರು ಈ ಕಡೆ ಇರಲಿ, ಆ ಕಡೆ ಇರಲಿ ಅವರು ನಿಸ್ವಾರ್ಥಿಗಳಾಗಿಲ್ಲದಿದ್ದಲ್ಲಿ ಅವರು ಸತ್ಯ ಧರ್ಮಗಳಿಂದ ಕೆಲಸಮಾಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ನಾನು ನಮ್ಮ ಮಟ್ಟಿಗೆ ಹೇಳುವುದಾದರೆ—ನಾವು ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬಂದಿದ್ದೇವೆಂದು ಹೇಳುತ್ತೇನೆ. ನಾವು ಇನ್ನೊಬ್ಬರನ್ನು ಪರಿಶುದ್ಧರಾಗಿರಿ ಎಂದು ಹೇಳುವುದಕ್ಕೆ ಮುನ್ನ ನಾವು ಪರಿಶುದ್ಧರಾಗಿರಬೇಕು. ಆದರೆ ಈಗಾಗಲೇ ತಾಲ್ಲೂಕ್ ಬೋರ್ಡ್ ಮತ್ತು ಪುರಸಭೆಗಳಲ್ಲಿ ನಿಸ್ಪೃಹರಾಗಿ, ತ್ಯಾಗಮಾಡಿ ಸೇವೆಯನ್ನು ಸಲ್ಲಿಸಿ ಬಂದಿರುವಂಥ ಪರಿಶುದ್ಧ ಜನಗಳಾಗಿದ್ದೇವೆ; ನಾವು. ಆದರೆ ಆ ಪುರಸಭೆಯನ್ನು ದಾಟಿ ಮುಂದೆ ಬಂದವರಲ್ಲಿ, ಅಂದರೆ, ಮಂತ್ರಿಮಂಡಲಕ್ಕೆ ಬರತಕ್ಕವರಲ್ಲಿ ಆ ತ್ಯಾಗ ಮತ್ತು ಸೇವೆಗಳು ತಿರುವುಮುರುವಾಗಿವೆ. ನನಗೆ ತಿಳಿದಿರುವಂತೆ ಪುರಸಭೆಯ ಮಟ್ಟದವರೆಗೆ ಹೇಳುವುದಾದರೆ, ಅಲ್ಲಿ 100ಕ್ಕೆ 90 ಜನರು ಒಳ್ಳೆಯವರಿರುತ್ತಾರೆ. ಆದರೆ ಅಲ್ಲಿಂದ ದಾಟಿ ಮುಂದೆ ಬಂದವರು ಬಹು ಜನ ಅಡ್ಡದಾರಿಗೆ ಹೋಗುತ್ತಾರೆ. ತ್ಯಾಗಮಾಡಬೇಕೆಂದರೆ ಅದು ಎಲ್ಲರಿಗೂ ಅಷ್ಟು ಸುಲಭವಾಗಿ ಬರತಕ್ಕದ್ದಲ್ಲ. ಇಂಥ ರಂಗಕ್ಕೆ ಬರತಕ್ಕ ಜನರು ಅವರು ಎಂದೂ ವ್ಯವಹಾರ ಮಾಡದಿರುವಂಥ ವ್ಯವಹಾರಕ್ಕೆ ಕೈ ಹಾಕುತ್ತಾರೆ. ಎಂದೂ ಸಕ್ಕರೆ ವ್ಯಾಪಾರಕ್ಕೆ ಕೈ ಹಾಕದಿದ್ದ ಜನರು ಸಕ್ಕರೆ ಪರ್ಮಿಟ್ಟನ್ನು ಕೇಳುವುದು, ವರ್ಷಕ್ಕೆ ಹತ್ತಾರು ಸಾವಿರ ರೂಪಾಯಿಗಳ ವ್ಯವಹಾರ ಮಾಡದಿದ್ದವರೂ ವರ್ಷದಲ್ಲಿ ಲಕ್ಷಾಂತರ ರೂಪಾಯಿಗಳ ವ್ಯವಹಾರ ನಡೆಸಿರತಕ್ಕ ನಿದರ್ಶನಗಳಿವೆ. ಅಷ್ಟೇ ಅಲ್ಲ ಕೆಲವು ಸೊಸೈಟಿಗಳವರೂ ಕೂಡ 80 ರೂಪಾಯಿಗೆ ತಂದ ಬೇಳೆಯನ್ನು 180 ರೂಪಾಯಿಗೆ ಮಾರಾಟ ಮಾಡಿರತಕ್ಕ ನಿದರ್ಶನಗಳೂ ಇವೆ. ಇದನ್ನೆಲ್ಲಾ ನೋಡಿದರೆ ಸರ್ಕಾರ ಯಾವ ರೀತಿ ಕೆಲಸಮಾಡುತ್ತಿದೆ ಎಂಬುದು ಗೊತ್ತಾಗುತ್ತದೆ. ನಮ್ಮ ಪ್ರಧಾನ ಸಚಿವರಾಗಿದ್ದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳವರು ದೇಶದ ಯಾವುದೋ ಮೂಲೆಯಲ್ಲಿ ಒಂದಾವರ್ತಿ ರೈಲ್ವೆ ಆಕ್ಸಿಡೆಂಟಾದುದಕ್ಕೆ ಅವರು ತಮ್ಮ ಮಂತ್ರಿಪದವಿಗೆ ರಾಜೀನಾಮೆಯನ್ನು ಕೊಟ್ಟರು. ಆದರೆ ಇಲ್ಲಿ ನಮ್ಮ ಮುಖ್ಯ ಮಂತ್ರಿಗಳು ಒಂದು ಕಡೆ ಚುನಾವಣೆಯಲ್ಲಿ ಸೋತಮೇಲೆ ಇನ್ನೆಲ್ಲಿಯೋ ಹೋಗಿ ಚುನಾವಣೆಗೆ ನಿಂತು ಗೆದ್ದರು. ಇಲ್ಲಿ ನಮ್ಮವರು ಮಾಡತಕ್ಕ ಕಾರ್ಯಗಳು ಎಂಥವು ಎಂಬುದು ಒಂದು ಎಳೆಯಮಗುವಿಗೂ ಸಹಾ ಅರ್ಥವಾಗುತ್ತದೆ. ಯಾರೋ ಒಬ್ಬ ಅಗಸರವನು ಹೇಳಿದ ಮಾತೇ ಪ್ರಾಮುಖ್ಯವೆಂದು ಭಾವಿಸಿ ಸೀತಾದೇವಿಯನ್ನು ಪವಿತ್ರವಾಗಿದ್ದರೂ ಶ್ರೀರಾಮನು ಪರೀಕ್ಷೆಗೆ ಗುರಿಪಡಿಸಿದನು. ಅಂದಮೇಲೆ ಇಲ್ಲಿ ನಮ್ಮ ಮಂತ್ರಿಗಳು ಒಂದು ಸಾರ್ವಜನಿಕ ಚುನಾವಣಾ ಕ್ಷೇತ್ರದಲ್ಲಿ ನಿಂತು ಸೋತ ಮೇಲೆ ಮತ್ತೊಂದು ಕ್ಷೇತ್ರಕ್ಕೆ ಹೋಗಿ ಸ್ಪರ್ಧಿಸುವುದು ಒಂದು ರೀತಿಯಲ್ಲಿ ಅದನ್ನು ನಾನು ರಾಜಕೀಯ ವ್ಯಭಿಚಾರವೆಂದು ಹೇಳುತ್ತೇನೆ. ಅಂದರೆ ನಾವು ಇಲ್ಲಿ ಹೇಳುವುದೇ ಒಂದು ಮಾಡುವುದೇ ಒಂದು, ಹೀಗಾದರೆ ದೇಶ ಖಂಡಿತ ಉದ್ಧಾರವಾಗುವುದಿಲ್ಲ. ಮಂತ್ರಿಮಂಡಲದಲ್ಲೂ ಇಂಥ ಜನಗಳಿದ್ದಾರೆ............

12-00 NOON

ಅದು ಎಲ್ಲಾ ಕಡೆಯಲ್ಲಿಯೂ ಇರುತ್ತದೆ. ಆದರೆ ಆಡಳಿತ ಪಕ್ಷದವರಲ್ಲಿ ಶೇಕಡ 90 ಭಾಗ ವಿದ್ದರೆ ನಮ್ಮಲ್ಲಿ 10 ಭಾಗವಿರುತ್ತದೆ. ಏಕೆಂದರೆ ತ್ಯಾಗ ಎಲ್ಲೆಲ್ಲಿಯೂ ಒಂದೇ. ತ್ಯಾಗದ ಅಳತೆಯ ಗೋಲು ಆ ಪಕ್ಷದವರದು ಬೇರೆಯಲ್ಲ, ನಮ್ಮ ಪಕ್ಷದವರದು ಬೇರೆಯಲ್ಲ. ಒಟ್ಟಿನಲ್ಲಿ ತ್ಯಾಗ ಆ ಕಡೆಯಲ್ಲಿ ಅಷ್ಟಾಗಿಲ್ಲವೆಂದು ಹೇಳಬಹುದು. ತ್ಯಾಗ ಈ ಕಡೆಯಿಂದ ಆ ಕಡೆಗೆ ಜಾಸ್ತಿ ಬರುತ್ತದೆಯೋ ಹೊರ್ತು ಅಲ್ಲಿಂದೇನಿಲ್ಲ. ಸಿಹಿ ಜಾಸ್ತಿ ಇಲ್ಲಿದೆ. ಇಲ್ಲಿ ಡಲ್ಬರ್ ಕರೆಂಟ್ ಬೇರೆ ಇದೆ. ಸ್ವಿಚ್ ಹಾಕಿದರೆ ಯಾವ ರೀತಿ ಮನೆಯೆಲ್ಲಾ ಹತ್ತಿಕೊಳ್ಳುತ್ತದೋ ಅಂತಹ ಒಂದು ಶಕ್ತಿ ಈ ಕಡೆ ಇದೆ. ಸಾರ್ವಜನಿಕ ಕ್ಷೇತ್ರದಲ್ಲಿ ನಿಜವಾಗಿ ಸೇವಾಕಾಂಕ್ಷೆಯುಳ್ಳವರು ಸಂಪೂರ್ಣವಾಗಿ ತ್ಯಾಗ ಮಾಡಬೇಕು. ಆ ದೃಷ್ಟಿಯಲ್ಲಿ ನೋಡುವುದಾದರೆ ಆ ಕಡೆಯಲ್ಲಿ ಹಳಬರು ಅನೇಕರು ಇದ್ದಾರೆ. ಆದರೆ ಅವರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಅಂತಹವರಲ್ಲಿಯೂ ಸಹ ಅನೇಕ ಕೊಳಕು ಇರುತ್ತದೆ. ಅದನ್ನು ಕೂಡಲೇ ತೊಡೆದುಹಾಕಲು ಪ್ರಯತ್ನಮಾಡಬೇಕು. ನಾವು ಒಂದು ಲಕ್ಷ ಜನರ ಪ್ರತಿನಿಧಿಗಳಾಗಿ ಆರಿಸಿಬಂದಂಥ ವ್ಯಕ್ತಿಗಳು. ಆ ಒಂದು ಲಕ್ಷ ಜನರೂ ಇಂತಹ ಒಂದು ಅವಹೇಳನಕ್ಕೆ ಇಳಿದರೆ ನಾವಾಗಿಯೇ ಇಂಥಹ ಸಮಸ್ಯೆಗಳನ್ನು ಸೃಷ್ಟಿ ಮಾಡಿದ ಹಾಗಾಗುತ್ತದೆ, ಆದ್ದರಿಂದ ಅಂತಹ ಹವ್ಯಾಸಕ್ಕೆ ನಾವ್ಯಾರೂ ಹೋಗದೆ ಒಳ್ಳೆಯ ವಾತಾವರಣವನ್ನು ಕಲ್ಪಿಸಿಕೊಡಬೇಕು. ಈಗಿನ ಒಂದು ಸನ್ನಿವೇಶದಲ್ಲಿ ಪ್ರತಿಯೊಬ್ಬನೂ ಜಗತ್ತಿನಲ್ಲಿ ಒಂದಲ್ಲ, ಒಂದು ರೀತಿಯಲ್ಲಿ ಸೇವೆ ಮಾಡುವ ಒಂದು ಅವಕಾಶ ದೊರೆತಿದೆ. ಅಂತಹ ಒಂದು ಸೇವೆಯನ್ನು ಕೆಲವರು ದೊಡ್ಡ ಸ್ಥಾನದಲ್ಲಿದ್ದು ಮಾಡಬಹುದು, ಕೆಲವರು ಸಣ್ಣ ಸ್ಥಾನದಲ್ಲಿದ್ದುಕೊಂಡು ಕೇವಲ ಬಡವನಾಗಿ ಮಾಡಬಹುದು, ಮತ್ತೆ ಕೆಲವರು ಏನೂ ಸ್ಥಾನಗಳನ್ನು ಪಡೆಯದೆಯೇ ಯಾರ ಗೋಚರಕ್ಕೂ ಬಾರದ ಹಾಗೆ ಸೇವೆ ಮಾಡತಕ್ಕ ಒಂದು ಅವಕಾಶ, ಸುಯೋಗ ಹೊಂದಿದ್ದಾರೆ. ಯಾವ್ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಸೇವೆ ಮಾಡುತ್ತಾರೋ ಅಷ್ಟಷ್ಟು ಪುಣ್ಯ ಅಷ್ಟೇ ಸಂಪೂರ್ಣವಾಗಿರುತ್ತದೆ. ಮುಖ್ಯ ಮಂತ್ರಿಗಳು ದೇಶಕ್ಕೆಲ್ಲಾ ಒಳ್ಳೆಯದನ್ನು ಮಾಡಬಹುದು, ಆದರೆ ಕೆಲವು ಸಂದರ್ಭಗಳಲ್ಲಿ ಅಂತಹವರೂ ಕೂಡ ಅನ್ಯಾಯಮಾಡುವುದು ಇರುತ್ತದೆ, ಏಕೆಂದರೆ ಅವರಿಗೆ ಅಂತಹ ಒತ್ತಡಗಳು ಜಾಸ್ತಿ ಇರುತ್ತವೆ. ನಮ್ಮಂತಹವರು ಮಾಡತಕ್ಕ ತಪ್ಪುಗಳ ಅವಕಾಶ ಕಡಿಮೆ ಇರುತ್ತದೆ. ಆದರೆ ಯಾರೇ ಆಗಲಿ ದೇಶದ ಹಿತದೃಷ್ಟಿಯಿಂದ ಹಾಗೂ ಜಗತ್ತಿನ ಹಿತದೃಷ್ಟಿಯಿಂದ ಬದುಕಿ ಬಾಳಬೇಕಾದರೆ ನಮ್ಮ ಹಿಂದೂಸ್ಥಾನದಲ್ಲಿ ಇಡೀ ದೇಶದ ಘನತೆ, ಗೌರವಗಳನ್ನು ಎತ್ತಿಹಿಡಿದು ಬಾಳಿದ ಮಹನೀಯರು ಹಾಕಿಕೊಟ್ಟಿರತಕ್ಕಂಥ ದಾರಿಯನ್ನು ಅನುಸರಿಸಬೇಕು. ಸಾಮಾನ್ಯವಾಗಿ ಹೇಳುವುದಾದರೆ ಅಮೇರಿಕಾ ದೇಶದಲ್ಲಿ ಕೇವಲ ಒಬ್ಬ ಮನುಷ್ಯನ ಮುಂದೆ ಒಂದು ವರ್ತಮಾನಪತ್ರಿಕೆಯನ್ನು ಇಟ್ಟರೆ ಆ ಮನುಷ್ಯ ಅದರ ಬೆಲೆಯನ್ನು ಡಬ್ಬದಲ್ಲಿ ಹಾಕಿ ಆ ಪತ್ರಿಕೆಯನ್ನು ಹಿಡಿದುಕೊಂಡು ಹೋಗುತ್ತಾನೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ನಮ್ಮಲ್ಲಿ ಬೇರೆ ರೀತಿ ನಡೆವಳಿಕೆಗಳು ಬರುತ್ತಾ ಇವೆ. ಆದ್ದರಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡತಕ್ಕ ಜನರ ಜವಾಬ್ದಾರಿ ಬಹಳಮಟ್ಟಿಗೆ ಇದೆ. ಅಂತಹವರು ಅದನ್ನು ನಿರ್ವಹಿಸಬೇಕಾದರೆ ನಿಜವಾಗಿ ಒಳ್ಳೆಯ ತ್ಯಾಗಿಗಳಾಗಬೇಕು ಮತ್ತು ಒಳ್ಳೆಯ ನಿಷ್ಠಾವಂತರಾಗಬೇಕು. ಅಂತಹವರ ಗೌರವವನ್ನು ಉಳಿಸಬೇಕಾದರೆ ನಿಜವಾಗಿ ಈ ನಿರ್ಣಯಕ್ಕೆ ಎಲ್ಲರೂ ಮಾನ್ಯತೆ ಕೊಡಬೇಕು. ಒಟ್ಟಿನಲ್ಲಿ ಈ ನಿರ್ಣಯಕ್ಕೆ ಈ ಸಭೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ. ನಾನು ಕೆಲವು ಮಾತನ್ನು ಬಹಳ ವ್ಯಸನದಿಂದ ಹೇಳಬೇಕಾಯಿತು. ನಾವು ಇಲ್ಲಿ ಹೇಳಿದಂತಹ ಅನೇಕ ವಿಚಾರಗಳನ್ನು ಕೂಡಲೇ ಸರ್ಕಾರದವರು ಗಣನೆಗೆ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ, ನನ್ನ ಮಾನ್ಯ ಸ್ನೇಹಿತರು ತಂದಿರತಕ್ಕ ನಿರ್ಣಯಕ್ಕೆ ಎಲ್ಲರೂ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† Sri V. S. PATIL (Belgaum).—Sir, I rise to support the resolution moved by our friend Sri H. R. Keshavamurthy. The resolution is that this assembly recommends to the Government to appoint a Commission to assess the moveable and immovable properties owned after the year 1947 by Ministers, ex-ministers, legislators and other persons, including the industrialists and businessmen in the State. While speaking on this resolution, some said that it is too vague and that it is very difficult for being implemented. Of course, if a man does not want to do a particular thing, he can put forth hundreds of objections, even though the intention of the resolution may be good. The very fact, Sir, that during the

(SRI V. S. PATIL)

debate on this resolution, none of the top ranking persons on the other side are present clearly shows that they do not like even the idea of criticism. Otherwise, they would have certainly remained in this August House to listen to what the members, both from the Congress party as well as from the Opposition, will express on this particular resolution.

Sir, apart from party politics or party trends, we have to see how we can best serve our country which has gained independence after about 200 years. If we do not create an atmosphere in which the people of our country will have faith in our Government, will have complete obedience to the orders of the Government, then I think history will repeat itself. We know, Sir, that we lost our freedom not because the administrators were bad, or in competent, but because in the administration of the various States in India, the main thing that has cropped up was corruption and nepotism. These were the two things that were rampant in India just before the Britishers came here. It was due to these things that we lost our freedom to the Britishers. When we know all these things from history, is it not our duty to learn at the nick of time as to how we should correct the mistakes that have been committed or likely to be committed ? But, I think, the present rulers of the country are ignoring all these things. During the last 16 or 17 years of Congress rule, the only thing that has cropped up or taken firm hold in the soil of the country is corruption, nepotism and inefficiency in administration. People have ignored all these things because, they were overjoyed when they got freedom. But, Pandit Jawaharlal Nehru also realised this mistake at the fag end of his life. When the Chinese attacked us suddenly in 1962, he was shaken from his stupor and then he began to realise what is going on in the country. During all the years, up to the end of 1962, the only thing that was rampant in the country was corruption. And, to wipe out all these things, Mr. Nehru took the proper steps to have or to effect this Kamraj planin order to drive out some of the undesirables from the administration. That work was started. But, unfortunately, the work was too heavy for Mr. Nehru. He became over-worked and succumbed. Then, the only person who could follow up this trend of purifying the administration was our Lal Bahadur. He also had shown guts even from the beginning and tried to improve it.

We know how hard our Lal Bahadur worked for the nation, for simplicity and high thinking which are essential for our country. When his son who was drawing Rs. 300 per month was offered a job by a big capitalist on Rs. 4,000 per month on the second day when Lal Bahadur assumed the premiership, he asked his son, "How is it that you can be so efficient as to rise within one day from Rs. 300 to Rs. 4,000 ? Is it your capacity, is it your due ?" The result is that the obedient boy resigned that post. Is there any Congressman or anybody else in this House who can direct his son or relative like that ? It is no use merely

lauding Sastriji because he is no more. If he had remained alive for 5-10 years, I think he would have done much for our country and many of the persons who are occupying the Treasury Benches at present would certainly have disappeared. But unfortunately for our country we have lost him due to heavy work that was imposed upon him Even though he has gone, we have to follow his footsteps and see that the corruption in the administration is wiped out. It is a horrible thing. You go to any village, any town, any street or you come to Bangalore, the principal city of the State and you will find that there is nothing except corruption in all the Departments of the Government. Now, at Belgaum illicit liquor is being sold by the police themselves. Upto now they were merely taking some money from the bootleggers, either weekly or monthly, and allowing them to sell. But now they themselves are selling. This shows to what extent this sort of corrupt administration can go. This is a horrible thing and people are looking day in and day out at the administration by these people. The worst thing is that the people are losing faith in the administration; that is not proper. That will definitely land us in further difficulties. Because the Chinese attacked and because Pakistan attacked, the nation stood as one man to defend the country and not to defend Congressmen or corrupt officers. They must realise this distinction. The people stood up as one man to defend the country, but some Congress people feel that the nation stood as one man to defend them and their administration; that is not correct. They are misinterpreting the popular enthusiasm in their favour. Some of the big bosses of the Congress tried to hold the elections one year before the due date because the trend was to support the Government. We are supporting the Government to defend the nation against aggression and not to defend the corrupt people in the country. This distinction has got to be made and must be realised by those who are ruling us.

This is a very simple resolution and it only furthers the cause that was enunciated by Pandit Jawaharlal Nehru since 1962 and it was followed and implemented by Sastriji. There is nothing new in it because we know that people who have been successful in defrauding others have been given promotions in the Congress. This is really horrible. Those who have swindled and ruined public concerns have been given high jobs in the Congress hierarchy. This is really horrible We must give some value to the moral status of a person before we give him any important job. I heard patiently my friend Sri Doddametti and his thinking is correct. But how is it to be implemented? He says that proper men should be set up as candidates in the coming elections. Every man who is selected by the Congress Party must give thousands of rupees to the party. Is it not corruption? The corruption starts while recommending candidates. If a candidate has to give huge amounts to the Congress Party and then he has to spend for elections thousands of rupees, how is he going to get all that money? When he is elected, he will try to recoup that and earn a little more for the future elections. This is a vicious circle that is going on since the Congress Party came into power. The basic ill is that some of our leaders have gone to foreign countries and seen how the political

(SRI V. S. PATIL)

parties are working there. Some of them have gone to America where the basic principle of every American is, 'To be born poor is not a sin but to remain poor after 30 or 40 years is a sin'. That is why persons like Biju Patnaik and others amass wealth.

Mr. DEPUTY SPEAKER.— Order, order.

Sri V. S. PATIL.—It is a public thing; not a private thing. It was debated even in Parliament.

Mr. DEPUTY SPEAKER.—We must not bring in persons who are not here to defend themselves.

Sri V. S. PATIL.—It is a fact. Everywhere, in the Press and on the platform and even in Parliament it has been debated. I know that we are not to take names, but when a particular person has become a personage of the public, then I think there is no harm in taking his name. It is merely an example. Some people amass wealth in their own name, some in the names of their sons and yet others in the names of their wives and relatives. How to check this? Our late Pandit Jawahralal Nehru and Lal Bahadur Sastry took the step of punishing the fathers of such sons One was the Chief Minister of Punjab and the other was the Finance Minister at the Centre.

These fathers were abandoned for the sins committed by their sons? Are there no such fathers here in this House who have allowed their sons and relations to amass wealth? This is the point to be considered by us. Are we not to follow what is done at the Centre where the Congress Party is ruling? If we have to keep the same policy, the same trend and the same standard and morality, then it is quite essential to investigate as to how many fathers have allowed their sons to amass wealth. For that reason is it not necessary to pass such a resolution and to appoint some Committee to investigate? Men of tuppens have amassed wealth by entering politics They were people from my profession as pleaders who could not get even Rs. 10 a month when they were practising and because there was no practice they tried to get in to Government service. But since the British Government did not take them in service in spite of their vast experience and ability, when they became frustrated they joined the national movement. Then in this movement they suffered some imprisonment, but because they were given A class or B class in the prison they could get better food in the prison than in their homes by their own earning. Now they are occupying the treasury benches in the whole of India There is one more thing why this corruption has increased. The moment we got independence all these people clamoured that they suffered for the independence of the country and they must be given something and on that account they persuaded the authorities to ignore if anything was done by the individuals. Under that cover this crop of corrupt people has grown in dimension and now it has become difficult for an honest man to sustain himself. We have seen the example of our late Prime Minister

Lal Bahadur Shastry who died in debts of Rs. 1,500 as reported in the Press. I do not think any of our Ministers or Deputy Ministers are in any debts.

Sri K. NAGAPPA ALVA (Minister for Health).—Is it your idea that we should incur debts ? There is some meaning in saying that we should not amass wealth by becoming corrupt, but there is a way of putting it. It is wrong to generalise from any stray incident. I am sorry that an eminent lawyer like the hon'ble member is generalising like this.

Sri V. S. PATIL.—If we look to the election expenses of these Ministers every Hon'ble Minister is bound to incur debts if he is honest. If he is not honest, then he need not incur any debt at all. What is the income of these Ministers and Deputy Ministers from their profession and what is the election expense that they have incurred ? If we take these two figures then it will be found that they will definitely have to incur debts for elections. I do not think that any Minister will be able to survive by this paltry sum of Rs. 900 or Rs. 600 per month honestly as a Minister here. I have said several times on the floor of this House, pay the Ministers a higher salary and we will not grumble against it, but let them be honest in their dealings. Pay them even Rs. 3,000 per month. Don't make a show of simplicity by receiving only Rs. 900 and taking huge sum of money from the other side. That is very bad. That is the reason why I am saying that there is none in this House especially on the other side who can say that he is a true follower of Lal Bahadur Shastry. They have no right at all to say so. They have absolutely alienated every sympathy from the people. We love Jawaharlal Nehru and Lal Bahadur Shastry, but that love cannot be had to any Congressman. They do not expect it and they should not expect it. For this reason, for the betterment of the country and the stability of our democracy we must exert every nerve to see that these corrupt men are thrown out and the wealth that is amassed by these people are taken back by rigorous means. If we collect all that I do not think it is necessary for us to bring in any more taxation measures. By collecting all this money we can fill up the gap in the implementation of our huge five-year plans because such a huge amount has been locked up by these people. So I honestly feel that something must be done to stop this corruption and we must create a machinery and put it in line with our tradition for culture, honesty, truth and justice.

Mr. DEPUTY SPEAKER.—Sri Keshavamurthy has to commence his speech but since the time is almost up, I think we can now adjourn.

Sri K. S. SURYANARAYANA RAO.—The time for this Resolution will then have to be extended. We request the Speaker to extend the time.

Sri A. P. APPANNA.—Extension by one hour is enough.

Mr. DEPUTY SPEAKER.—The time for this Resolution is extended by one hour.

The House will now adjourn and meet again at 1-00 P.M. on Monday.

The House adjourned at Thirty Minutes past Twelve of the Clock to meet again at One of the Clock on Monday, the 31st January 1966.